# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು- 572 103

ದಿನಾಂಕ: 20.05.2020 ರಂದು ಬೆಳಿಗ್ಗೆ: 11:00 ಗಂಟೆಗೆ ಸರ್. ಎಂ. ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇಲ್ಲಿ ನಡೆದ 2019-20ನೇ ಸಾಲಿನ ಆರನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳು

**ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ವೈ.ಎಸ್. ಸಿದ್ದೇಗೌಡ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಬಿ.ಟಿ. ಸಂಪತ್ ಕುಮಾರ್<br>ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 3. | ಶ್ರೀ ಶ್ರೀನಿವಾಸ ಆರ್.ಕೆ.<br>ತಂದೆ: ಲೇಟ್ ಕಲ್ಲಪ್ಪ, ರಂಗಾಪುರ, ಕೊಟ್ಟ ಅಂಚೆ, ಶಿರಾ ತಾಲ್ಲೂಕು,<br>ತುಮಕೂರು ಜಿ.-572137. | ಸದಸ್ಯರು |
| 4. | ಕುಮಾರಿ ಐಶ್ವರ್ಯ ಸುರೇಶ್,<br>ನಂಬರ್ 220, 2ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಎ.ಇ.ಸಿ.ಎಸ್. ಬಡಾವಣೆ,<br>ಸಂಜಯ್‌ನಗರ, ಬೆಂಗಳೂರು-560094. | ಸದಸ್ಯರು |
| 5. | ಡಾ. ನರಸಿಂಹನ್ ಎಂ.ಎಸ್.,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್, ತುಮಕೂರು ಜಿಲ್ಲೆ. | ಸದಸ್ಯರು |
| 6. | ಪ್ರೊ. ಡಿ.ಎಸ್. ಮುನಿಂದ್ರಕುಮಾರ್,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ, ತುಮಕೂರು ಜಿಲ್ಲೆ. | ಸದಸ್ಯರು |
| 7. | ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್.<br>'ನಂಜುಂಡೇಶ್ವರ ನಿಲಯ' ಹೆಚ್.ಪಿ.ಎಸ್. ರಸ್ತೆ, ಶಿವಮೂಕಾಂಬಿಕ ನಗರ, ತುಮಕೂರು-572102. | ಸದಸ್ಯರು |
| 8. | ಶ್ರೀ ಪ್ರಸನ್ನಕುಮಾರ್<br>ನಂ. 126, ಅಮರ್ ಟವರ್ಸ್, 1ನೇ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು-560009. | ಸದಸ್ಯರು |
| 9. | ಶ್ರೀ ರಾಜು<br>ನಂ.734/2, ಗೋವಿನಪುರ ರಸ್ತೆ, ಕೆ.ಆರ್. ಬಡಾವಣೆ, 8ನೇ ಅಡ್ಡರಸ್ತೆ, ಚರ್ಚ್ ಕಾಂಪೌಂಡ್ ಪಕ್ಕ,<br>ತಿಪಟೂರು-572201. ತುಮಕೂರು ಜಿಲ್ಲೆ. | ಸದಸ್ಯರು |
| 10. | ಶ್ರೀ ಟಿ.ಡಿ. ವಿನಯ್,<br>'ನೇಮಿ ನಿವಾಸ' 5ನೇ ಅಡ್ಡರಸ್ತೆ, ಗೋಕಾಕ ರಸ್ತೆ, ಸರಸ್ವತಿಪುರಂ, ದೇವರಾಜ ಅರಸ್ ರಸ್ತೆ,<br>ತುಮಕೂರು-572105. | ಸದಸ್ಯರು |
| 11. | ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ<br>ನಂ. 472, 'ಶ್ರೀ ನಿರ್ಮಲ ನಿಲಯ', 2ನೇ ಸಿ ಮುಖ್ಯರಸ್ತೆ, 11ನೇ ಬ್ಲಾಕ್, 2ನೇ ಹಂತ,<br>ನಾಗರಭಾವಿ, ಬೆಂಗಳೂರು-560072. | ಸದಸ್ಯರು |
| 12. | ಶ್ರೀಮತಿ ಎಂ.ಎಸ್. ಭವ್ಯ,<br>ವಿಲ್ಲಾ ನಂ.12, ಕೃಷ್ಣ ನಾರ್ಥ್‌ವುಡ್ಸ್, ಚೊಕ್ಕಣ ಹಳ್ಳಿ ವಿಲೇಜ್, ಜಕ್ಕೂರು ಪೋಸ್ಟ್,<br>ಬೆಂಗಳೂರು-560064. | ಸದಸ್ಯರು |
| 13. | ಪ್ರೊ. ಪಿ. ಪರಮಶಿವಯ್ಯ,<br>ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,<br>ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | ಸದಸ್ಯರು |
| 14. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 15. | ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |
| 16. | ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಹಾಜರಾಗದ ಸದಸ್ಯರು

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ರವರು ಅಥವಾ ಇವರ ಪ್ರತಿನಿಧಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 5. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 6. | ಪ್ರೊ. ರಾಜಣ್ಣ ಕೆ.ಎಂ.,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು, ತುಮಕೂರು ಜಿಲ್ಲೆ. | ಸದಸ್ಯರು |

ಪ್ರಸ್ತಾವನೆ:

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ದಿನಾಂಕ: 20.05.2020 ಬುಧವಾರ ಬೆಳಿಗ್ಗೆ: 11.00ಕ್ಕೆ ನಡೆದ 2019–20ನೇ ಸಾಲಿನ ಆರನೇ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು. ಕೋವಿಡ್–2019ರ ಹಿನ್ನಲೆಯಲ್ಲಿ ಪ್ರಸ್ತುತ ಸಭೆಯನ್ನು ಸಾಮಾಜಿಕ ಅಂತರವನ್ನು ಕಾಯ್ದಿರಿಸಿಕೊಂಡು ನಡೆಸುತ್ತಿರುವುದನ್ನು ಸಭೆಯ ಗಮನಕ್ಕೆ ತಂದರು. ಮುಂದುವರೆದು ಸರ್ಕಾರದ ಹಾಗೂ ಯು.ಜಿ.ಸಿ. ಮಾರ್ಗಸೂಚಿಯನ್ವಯ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮುಖಾಂತರ ತರಗತಿಗಳನ್ನು, ಪ್ರೊಜೆಕ್ಟ್, ಅಸೈನ್‌ಮೆಂಟ್ ಹಾಗೂ ಯುನಿಟ್ ಟೆಸ್ಟ್‌ಗಳನ್ನು ನಡೆಸುವ ಮುಖಾಂತರ ಶೈಕ್ಷಣಿಕವಾಗಿ ಯಾವುದೇ ತೊಡಕುಗಳಾಗದಂತೆ ಎಲ್ಲಾ ಅಧ್ಯಾಪಕರು ಅಗತ್ಯ ಕ್ರಮವನ್ನು ವಹಿಸಿರುತ್ತಾರೆ ಎಂದು ತಿಳಿಸಿದರು. ತುಮಕೂರು ವಿಶ್ವವಿದ್ಯಾನಿಲಯಕ್ಕೆ ಹೊಸದಾಗಿ ನೇಮಕಗೊಂಡ ಕುಲಸಚಿವರು (ಪರೀಕ್ಷಾಂಗ) ಇವರನ್ನು ಮತ್ತು ಸಿಂಡಿಕೇಟ್ ಸಭೆಗೆ ನೇಮಕಗೊಂಡಿರುವ ಡೀನರನ್ನು ಹಾಗೂ ಪ್ರಾಂಶುಪಾಲರುಗಳನ್ನು ಮಾನ್ಯ ಕುಲಪತಿಗಳು ಪರಿಚಯಿಸಿದರು ಹಾಗೂ ಸ್ವಾಗತಿಸಿದರು. ತದನಂತರ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಗಳ ಬಗ್ಗೆ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ಶ್ರೀನಿವಾಸ ಆರ್.ಕೆ. ಅವರು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಕಾಯ್ದೆ 2000 ರ ಪ್ರಕಾರ ಸಿಂಡಿಕೇಟ್ ಸಭೆಯನ್ನು 8 ವಾರಗಳಿಗೆ ಮೀರದಂತೆ ಆಯೋಜಿಸಬೇಕಿತ್ತು, ಆದರೆ ಹಿಂದಿನ ಐದನೇ ಸಾಮಾನ್ಯ ಸಿಂಡಿಕೇಟ್‌ಗೆ ಹಾಗೂ ಆರನೇ ಸಾಮಾನ್ಯ ಸಿಂಡಿಕೇಟ್ ಸಭೆಗೆ ಈ ಹಿಂದೆ ನಿಗದಿಯಾಗಿದ್ದ ದಿನಾಂಕ 27.03.2020 ಕ್ಕೆ 8 ವಾರಗಳು ಮೀರಿರುವುದನ್ನು ಸಭೆಯ ಗಮನಕ್ಕೆ ತಂದರು. ಈ ಸಂಬಂಧ ಕುಲಸಚಿವರು ಸಭೆಗೆ ವಿವರಿಸುತ್ತಾ, ಈ ಹಿಂದಿನ ಸಾಮಾನ್ಯ ಸಿಂಡಿಕೇಟ್ ಸಭೆಯ ನಂತರ ಎರಡು ವಿಶೇಷ ಸಿಂಡಿಕೇಟ್ ಸಭೆಗಳು ಆಯೋಜಿಸಿರುವುದನ್ನು ಗಮನಕ್ಕೆ ತರುತ್ತಾ, ಇನ್ನು ಮುಂದೆ 8 ವಾರಗಳೊಳಗೆ ಸಭೆಗಳನ್ನು ಆಯೋಜಿಸಲು ಅಗತ್ಯ ಕ್ರಮವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ಪ್ರಸನ್ನಕುಮಾರ್ ಇವರು ವಿದ್ಯಾ ವಿಷಯಕ ಪರಿಷತ್ತಿನ ಸಭೆಯನ್ನು ಸಿಂಡಿಕೇಟ್ ಸಭೆಯ ಕನಿಷ್ಠ 15 ದಿನ ಪೂರ್ವದಲ್ಲಿ ಆಯೋಜಿಸಿ, ನಡಾವಳಿಯನ್ನು ಸಿಂಡಿಕೇಟ್ ಸದಸ್ಯರುಗಳ ಅವಗಾಹನೆಗೆ ತಂದಲ್ಲಿ ಸಿಂಡಿಕೇಟ್ ಸಭೆಯು ನಿರ್ಣಯ ಕೈಗೊಳ್ಳಲು ಅನುವಾಗುವಂತೆ ಕ್ರಮವಹಿಸಲು ತಿಳಿಸಿದರು. ಸದರಿಯವರ ಅಭಿಪ್ರಾಯವನ್ನು ಸಭೆಯು ಅಂಗೀಕರಿಸಿತು ಹಾಗೂ ಈ ಸಂಬಂಧ ಅಗತ್ಯಕ್ರಮವಹಿಸುವಂತೆ ಸದಸ್ಯ ಕಾರ್ಯದರ್ಶಿಗಳಿಗೆ ಸೂಚಿಸಿತು.

| ಕ್ರ.ಸಂ | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| | | ಶೈಕ್ಷಣಿಕ ವಿಭಾಗ | |
| 01 | 2019–20.ಸಾ.ಸಿಂ–06<br>ಶೈ.ವಿಭಾಗ–01 | ಸ್ನಾತಕ ಪದವಿಗಳಲ್ಲಿ ದೈಹಿಕ ಶಿಕ್ಷಣ ಮತ್ತು ಕ್ರೀಡೆ ವಿಷಯದ ಮುಕ್ತ ಆಯ್ಕೆ ಪತ್ರಿಕೆಯ ಪಠ್ಯಕ್ರಮವನ್ನು ಅನುಮೋದಿಸುವ ಕುರಿತು. | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸದಸ್ಯರಾದ ಕು. ಐಶ್ವರ್ಯ ಸುರೇಶ್ ಇವರು ಕ್ರೀಡಾ ಸಲಹಾ ಸಮಿತಿಯ ಗಮನಕ್ಕೆ ಅಧ್ಯಯನ ಮಂಡಳಿಯವರು ಸಿದ್ಧಪಡಿಸಿರುವ ಪಠ್ಯಕ್ರಮವನ್ನು ತಂದಿಲ್ಲದಿರುವುದರ ಬಗ್ಗೆ ಸಭೆಯ ಗಮನಕ್ಕೆ ತಂದರು ಹಾಗೂ ಕ್ರೀಡಾ ಸಲಹಾ ಸಮಿತಿಯ ನಡಾವಳಿಗಳನ್ನು ನೀಡುವಂತೆ ತಿಳಿಸಿದರು. ಸದರಿ ವಿಷಯವು ಕ್ರೀಡಾ ಅಧ್ಯಯನ |

| | | | |
|---|---|---|---|
| | | | ಮಂಡಳಿಯ ಪರಿಣಿತ ವಿಷಯವಾಗಿರುವುದರಿಂದ, ಸಂಬಂಧಪಟ್ಟ ಅಧ್ಯಯನ ಮಂಡಳಿಯು ಪಠ್ಯಕ್ರಮವನ್ನು ಸಿದ್ದಪಡಿಸಿ, ವಿಶ್ವವಿದ್ಯಾನಿಲಯಕ್ಕೆ ಅನುಮೋದನೆಗಾಗಿ ಸಲ್ಲಿಸಿರುತ್ತದೆ ಹಾಗೂ ಸದರಿ ಪಠ್ಯಕ್ರಮವನ್ನು ವಿದ್ಯಾ ವಿಷಯಕ ಪರಿಷತ್ತಿಗೆ ಮಂಡಿಸಲಾಗಿದ್ದು, ವಿದ್ಯಾ ವಿಷಯಕ ಪರಿಷತ್ತು ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿದ್ದು, ಸಿಂಡಿಕೇಟ್ ಸಭೆಗೆ ಅನುಮೋದನೆಗೆ ಮಂಡಿಸುವುದು ಕ್ರಮವಾಗಿರುತ್ತದೆ. ಹಾಗೂ ಸದರಿ ವಿಷಯವು ಕೇವಲ ಪಠ್ಯಕ್ರಮವಾಗಿದ್ದು, ಕ್ರೀಡಾ ವಿಷಯಗಳಿಗೆ ಸಂಬಂಧಿಸಿದ policy ನಿರ್ಣಯಗಳನ್ನು ಕ್ರೀಡಾ ಸಲಹಾ ಸಮಿತಿಗೆ ಮಂಡಿಸಲಾಗುವುದು ಎಂದು ಮಾನ್ಯ ಅಧ್ಯಕ್ಷರು ತಿಳಿಸಿದರು.<br>ಸುದೀರ್ಘ ಚರ್ಚೆಯ ನಂತರ, ಸ್ನಾತಕ ಪದವಿಗಳಲ್ಲಿ ದೈಹಿಕ ಶಿಕ್ಷಣ ಮತ್ತು ಕ್ರೀಡೆ ವಿಷಯದ ಮುಕ್ತ ಆಯ್ಕೆ ಪತ್ರಿಕೆ Physical Education and Sports ಪಠ್ಯಕ್ರಮವನ್ನು 2020-21ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ಜಾರಿಗೊಳಿಸಲು ಒಪ್ಪಬಹುದು ಎಂಬ ವಿದ್ಯಾ ವಿಷಯಕ ಪರಿಷತ್ತಿನ ಶಿಫಾರಸ್ಸನ್ನು ಸಭೆಯು ಅನುಮೋದಿಸಿತು. |
| 02 | 2019-20.ಸಾ.ಸಿಂ-06 ಶೈ.ವಿಭಾಗ-02 | Concession for the wards of Kashmiri Migrants and Kashmiri Pandit/ Kashmiri Hindu Families (Non-Migrants) Living in Kashmir Valley for admission in Higher Educational Institutions-Regarding. ಕುರಿತು ಹೊರಡಿಸಿರುವ ಅಂಶಗಳನ್ನು ಅನುಷ್ಠಾನಗೊಳಿಸುವ ಬಗ್ಗೆ. | Concession for the wards of Kashmiri Migrants and Kashmiri Pandit/ Kashmiri Hindu Families (Non-Migrants) Living in Kashmir Valley for admission in Higher Educational Institutions-Regarding. ಕುರಿತು MHRD ಹೊರಡಿಸಿರುವ ಅಂಶಗಳನ್ನು 2020-21ನೇ ಶೈಕ್ಷಣಿಕ ಸಾಲಿನಿಂದ ಪ್ರವೇಶಾತಿಯ ವೇಳೆ ಅನುಷ್ಠಾನಗೊಳಿಸಲು ಒಪ್ಪಬಹುದು ಎಂಬ ವಿದ್ಯಾ ವಿಷಯಕ ಪರಿಷತ್ತಿನ ಶಿಫಾರಸ್ಸನ್ನು ಸಭೆಯು ಅನುಮೋದಿಸಿತು. |
| 03 | 2019-20.ಸಾ.ಸಿಂ-06 ಶೈ.ವಿಭಾಗ-03 | ಒಂದೇ ಸ್ಥಳದಲ್ಲಿರುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಲ್ಲಿ ಕಾಲೇಜು ಬದಲಾವಣೆಯ ಅವಕಾಶ ನೀಡಬಾರದೆಂಬ ಮನವಿಯ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ದಿನಾಂಕ 25.06.2010 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ನಿಗಧಿಪಡಿಸಿರುವ 07 ನಿಬಂಧನೆಗಳ ಜೊತೆಗೆ ಒಂದೇ ಸ್ಥಳದಲ್ಲಿರುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಕಾಲೇಜು ಬದಲಾವಣೆಯ ಅವಕಾಶವನ್ನು ನೀಡುವ ಬಗ್ಗೆ ವಿದ್ಯಾರ್ಥಿಗಳ ವಾಸ್ತವಿಕ ಪರಿಸ್ಥಿತಿಯನ್ನು ಡೀನರ ಸಮಿತಿಯು ಪರಿಶೀಲಿಸಿ ಶಿಫಾರಸ್ಸಿನನ್ವಯ ಅಗತ್ಯ ಕ್ರಮ ವಹಿಸುವ ನಿಬಂಧನೆಯನ್ನು ಸೇರಿಸಲು ಒಪ್ಪಬಹುದುದೆಂದು ವಿದ್ಯಾ ವಿಷಯಕ ಪರಿಷತ್ತು ಮಾಡಿರುವ ಶಿಫಾರಸ್ಸನ್ನು ಸಭೆಯು ಅನುಮೋದಿಸಿತು.<br>ಹೆಚ್ಚುವರಿಯಾಗಿ ಮಾನ್ಯ ಸದಸ್ಯರಾದ ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ ಹಾಗೂ ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್. ಇವರುಗಳ |

| | | | |
|---|---|---|---|
| | | | ಅಭಿಪ್ರಾಯದಂತೆ ಸಂಬಂಧಪಟ್ಟ ವಿದ್ಯಾರ್ಥಿಯು ಪೋಷಕರೊಂದಿಗೆ ಕೌನ್ಸಿಲಿಂಗ್‌ಗೆ ಹಾಜರಾಗುವಂತೆ ಹಾಗೂ ಕೌನ್ಸಿಲಿಂಗ್ ಸಮಿತಿಯ ಶಿಫಾರಸ್ಸನ್ನು ಒಬ್ಬ ವಿದ್ಯಾ ವಿಷಯಕ ಪರಿಷತ್ತು ಮತ್ತು ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಡೀನರ ಸಮಿತಿಗೆ ಮಂಡಿಸಲು ನಿರ್ಣಯಿಸಲಾಯಿತು. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಗೆ ಧಕ್ಕೆಯಾಗದಂತೆ ಕ್ರಮವಹಿಸುವಂತೆ ಸದಸ್ಯರಾದ ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್. ಮತ್ತು ಶ್ರೀ ವಿನಯ್ ಟಿ.ಡಿ. ಇವರು ಅಭಿಪ್ರಾಯ ನೀಡಿದರು. |
| 04 | 2019–20.ಸಾ.ಸಿಂ–06 ಶೈ.ವಿಭಾಗ–04 | ಬಿ.ವೋಕ್ ಕೋರ್ಸಿನ ಪರಿಷ್ಕೃತ ವಿನಿಯಮವನ್ನು ಅನುಮೋದಿಸುವ ಕುರಿತು. | ಬಿ.ವೋಕ್ ಪದವಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪದವಿ ಪ್ರಮಾಣ ಪತ್ರ ವಿತರಣೆ ಹಾಗೂ ರ್‍ಯಾಂಕ್ ಘೋಷಣೆಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯವು ಕೈಗೊಂಡ ಕ್ರಮವನ್ನು ಒಪ್ಪಬಹುದೆಂದು ಹಾಗೂ ಬಿ.ವೋಕ್ ಪದವಿಯ ಪರಿಷ್ಕೃತ ವಿನಿಯಮವನ್ನು ಅನುಮೋದಿಸಿ ಸರ್ಕಾರಕ್ಕೆ ಕಳುಹಿಸಲು ಒಪ್ಪಬಹುದು ಎಂಬ ವಿದ್ಯಾ ವಿಷಯಕ ಪರಿಷತ್ತಿನ ಶಿಫಾರಸ್ಸನ್ನು ಸಭೆಯು ಅನುಮೋದಿಸಿತು. |
| 05 | 2019–20.ಸಾ.ಸಿಂ–06 ಶೈ.ವಿಭಾಗ–05 | ಸ್ನಾತಕ ಸೈಬರ್ ಲಾ ವಿಷಯದ ಮುಕ್ತ ಆಯ್ಕೆ ಪತ್ರಿಕೆಯ ಪಠ್ಯಕ್ರಮವನ್ನು ಅನುಮೋದಿಸುವ ಕುರಿತು. | ಸ್ನಾತಕ ಸೈಬರ್ ಲಾ ವಿಷಯದ ಮುಕ್ತ ಆಯ್ಕೆ ಪತ್ರಿಕೆಯ ಪಠ್ಯಕ್ರಮವನ್ನು ಸಿದ್ಧಪಡಿಸಲು ರಚನೆಯಾಗಿರುವ ಅಧ್ಯಯನ ಮಂಡಳಿಯನ್ನು ಸ್ಥಿರೀಕರಿಸಿ, 2020–21ನೇ ಸಾಲಿನಿಂದ ಸ್ನಾತಕ ಸೈಬರ್ ಲಾ ವಿಷಯದ ಮುಕ್ತ ಆಯ್ಕೆ ಪತ್ರಿಕೆಯ ಪಠ್ಯಕ್ರಮವನ್ನು ಜಾರಿಗೊಳಿಸಲು ಒಪ್ಪಬಹುದು ಎಂಬ ವಿದ್ಯಾ ವಿಷಯಕ ಪರಿಷತ್ತಿನ ಶಿಫಾರಸ್ಸನ್ನು ಸಭೆಯು ಅನುಮೋದಿಸಿತು. |
| 06 | 2019–20.ಸಾ.ಸಿಂ–06 ಶೈ.ವಿಭಾಗ–06 | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ. | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕ್ರಮವನ್ನು ಸ್ಥಿರೀಕರಿಸಬಹುದೆಂಬ ವಿದ್ಯಾ ವಿಷಯಕ ಪರಿಷತ್ತಿನ ಶಿಫಾರಸ್ಸನ್ನು ಸಭೆಯು ಅನುಮೋದಿಸಿತು. |
| 07 | 2019–20.ಸಾ.ಸಿಂ–06 ಶೈ.ವಿಭಾಗ–07 | ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗೀಯ ಪರಿಷತ್ (Departmental Council) ರಚಿಸಿರುವ ಸಂಬಂಧ ಸ್ಥಿರೀಕರಣದ ಕುರಿತು. | ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗೀಯ ಪರಿಷತ್ (Departmental Council) ರಚಿಸಿರುವ ಕ್ರಮವನ್ನು ಸ್ಥಿರೀಕರಿಸಬಹುದೆಂಬ ವಿದ್ಯಾ ವಿಷಯಕ ಪರಿಷತ್ತಿನ ಶಿಫಾರಸ್ಸನ್ನು ಸಭೆಯು ಅನುಮೋದಿಸಿತು. |
| 08 | 2019–20.ಸಾ.ಸಿಂ–06 ಶೈ.ವಿಭಾಗ–08 | ಸ್ನಾತಕೋತ್ತರ ಎಂ.ಎಸ್ಸಿ. ಮನಃಶಾಸ್ತ್ರ ಪಠ್ಯಕ್ರಮದ ಅಧಿಸೂಚನೆ ಹಾಗೂ ಸಿಬಿಸಿಎಸ್ ವಿನಿಯಮದಲ್ಲಿ ತಿದ್ದುಪಡಿ ಮಾಡಿ ಸರ್ಕಾರದ ಅನುಮೋದನೆ ಪಡೆಯುವ ಕುರಿತು. | ಸ್ನಾತಕೋತ್ತರ ಎಂ.ಎಸ್ಸಿ. ಮನಃಶಾಸ್ತ್ರ ಪಠ್ಯಕ್ರಮವನ್ನು ಅನುಮೋದಿಸಿ, ಸಿಬಿಸಿಎಸ್ ವಿನಿಯಮದಲ್ಲಿ ತಿದ್ದುಪಡಿ (ಎಂ.ಎ. ಮನಃಶಾಸ್ತ್ರ ಬದಲು ಎಂ.ಎಸ್ಸಿ. ಮನಃಶಾಸ್ತ್ರ) ಮಾಡಿ ಸರ್ಕಾರದ ಅನುಮೋದನೆ ಪಡೆಯಬಹುದು ಎಂಬ ವಿದ್ಯಾ ವಿಷಯಕ ಪರಿಷತ್ತಿನ ಶಿಫಾರಸ್ಸನ್ನು ಸಭೆಯು ಅನುಮೋದಿಸಿತು. ಮುಂದುವರೆದು, ಸದಸ್ಯರಾದ ಶ್ರೀ ರಾಜು ಅವರು ಮನಃಶಾಸ್ತ್ರ ವಿಷಯವನ್ನು ಕೆಲವು ಸಂಯೋಜಿತ ಕಾಲೇಜುಗಳಲ್ಲಿ ಪ್ರಾರಂಭಿಸಲು ಪ್ರೇರೇಪಿಸುವುದು ಸೂಕ್ತ ಎಂದು ಅಭಿಪ್ರಾಯ ಪಟ್ಟರು. |

| | | | |
|---|---|---|---|
| 09 | 2019-20.ಸಾ.ಸಿಂ-06 ಶೈ.ವಿಭಾಗ-09 | ವಿಶ್ವವಿದ್ಯಾನಿಯದ ವಿವಿಧ ಸ್ನಾತಕೋತ್ತರ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ. | ವಿಶ್ವವಿದ್ಯಾನಿಯದ ವಿವಿಧ ಸ್ನಾತಕೋತ್ತರ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕ್ರಮವನ್ನು ಸ್ಥಿರೀಕರಿಸಬಹುದೆಂಬ ವಿದ್ಯಾ ವಿಷಯಕ ಪರಿಷತ್ತಿನ ಶಿಫಾರಸ್ಸನ್ನು ಸಭೆಯು ಅನುಮೋದಿಸಿತು. |
| 10 | 2019-20.ಸಾ.ಸಿಂ-06 ಶೈ.ವಿಭಾಗ-10 | ಸ್ನಾತಕೋತ್ತರ ಪದವಿಗಳ ಪ್ರವೇಶಾತಿಯಲ್ಲಿ Out of University ಕೋಟಾದಲ್ಲಿರುವ ಸೀಟುಗಳನ್ನು ಹಾಲಿ ಇರುವುದಕ್ಕಿಂತ ಶೇ.10 ರವರೆಗೆ ಹೆಚ್ಚಿಸುವ ಕುರಿತು. | ಸ್ನಾತಕೋತ್ತರ ಪದವಿಗಳ ಪ್ರವೇಶಾತಿಯಲ್ಲಿ Out of University ಕೋಟಾದಲ್ಲಿರುವ ಸೀಟುಗಳನ್ನು ಹಾಲಿ ಇರುವುದಕ್ಕಿಂತ ಶೇ.10 ರವರೆಗೆ ಹೆಚ್ಚಿಸಲು ಒಪ್ಪಬಹುದು ಎಂದು ವಿದ್ಯಾ ವಿಷಯಕ ಪರಿಷತ್ತಿನ ಶಿಫಾರಸ್ಸನ್ನು ಸಭೆಯು ಅನುಮೋದಿಸಿತು. "Know Your Campus" ಎಂಬ ಕಾರ್ಯಕ್ರಮದಡಿಯಲ್ಲಿ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಕ್ಯಾಂಪಸ್‌ನಲ್ಲಿರುವ ಎಲ್ಲಾ ವಿಭಾಗಗಳಿಗೆ ಭೇಟಿ ಹಾಗೂ ಪರಿಚಯವನ್ನು ನೀಡಲು ಕ್ರಮವಹಿಸಲಾಗುತ್ತಿದೆ ಎಂದು ಮಾನ್ಯ ಅಧ್ಯಕ್ಷರು ಸಭೆಗೆ ವಿವರಿಸಿದರು. |
| 11 | 2019-20.ಸಾ.ಸಿಂ-06 ಶೈ.ವಿಭಾಗ-11 | ಸ್ನಾತಕೋತ್ತರ ಕೋರ್ಸ್‌ಗಳಲ್ಲಿ MOOC ನ್ನು ಅಳವಡಿಸಿ ಸಿದ್ದಪಡಿಸಿರುವ ಪರಿಷ್ಕೃತ ಸಿ.ಬಿ.ಸಿ.ಎಸ್. ವಿನಿಯಮದ ಅನುಮೋದನೆ ಕುರಿತು. | ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ವಿನಿಯಮದಲ್ಲಿ ಮಾಡಿರುವ ಮಾರ್ಪಾಡುಗಳ ಬಗ್ಗೆ ಹಾಗೂ MOOC ಕಾರ್ಯಕ್ರಮಗಳ ಬಗ್ಗೆ ಮಾಹಿತಿಯನ್ನು ವಿಶ್ವವಿದ್ಯಾನಿಲಯದ MOOC ಸಂಯೋಜಕರು ಸಿಂಡಿಕೇಟ್ ಸಭೆಗೆ ನೀಡಿದರು. ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಸ್ನಾತಕೋತ್ತರ ಕೋರ್ಸ್‌ಗಳಲ್ಲಿ MOOC ನ್ನು ಅಳವಡಿಸಿ ಸಿದ್ದಪಡಿಸಿರುವ ಪರಿಷ್ಕೃತ ಸಿ.ಬಿ.ಸಿ.ಎಸ್. ವಿನಿಯಮವನ್ನು ಅನುಮೋದಿಸಿ ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸಲು ಒಪ್ಪಬಹುದೆಂಬ ವಿದ್ಯಾ ವಿಷಯಕ ಪರಿಷತ್ತಿನ ಶಿಫಾರಸ್ಸನ್ನು ಸಭೆಯು ಅನುಮೋದಿಸಿತು. ಆನ್‌ಲೈನ್ ಕೋರ್ಸುಗಳಿಗೆ ಸಂಬಂಧಿಸಿದಂತೆ ಮೂಲಭೂತ ಸೌಕರ್ಯಗಳನ್ನು ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಒದಗಿಸುವ ಕುರಿತು ಮಾಹಿತಿಯನ್ನು ಮಾನ್ಯ ಸದಸ್ಯರಾದ ಶ್ರೀ ಪ್ರಸನ್ನ ಕುಮಾರ್ ಅವರು ಕೋರಿದ್ದು, ಅಗತ್ಯ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ ಎಂದು ಮಾನ್ಯ ಅಧ್ಯಕ್ಷರು ತಿಳಿಸಿದರು. |
| | | **ಕಾಲೇಜು ಅಭಿವೃದ್ಧಿ ಪರಿಷತ್** | |
| 12 | 2019-20.ಸಾ.ಸಿಂ-06 ಕಾ.ಅ.ಪ.-01 | ಸರ್ಕಾರದ ಸೂಚನೆಯಂತೆ ಏಕರೂಪ ಸಂಯೋಜನೆ ಪರಿನಿಯಮಾವಳಿಯನ್ನು ರಚಿಸಿರುವ ಕುರಿತು. | ವಿಶ್ವವಿದ್ಯಾನಿಲಯವು ಸಿದ್ದಪಡಿಸಿರುವ ಸಂಯೋಜನೆ ಪರಿನಿಯಮಾವಳಿಯ ಪ್ರಕರಣ 3.1.1. ರ ಅಂಶಗಳಲ್ಲಿ ತುಮಕೂರು ವಿಶ್ವವಿದ್ಯಾನಿಲಯಕ್ಕೆ ಅನ್ವಯಿಸುವಂತೆ ತಿದ್ದುಪಡಿ ಮಾಡುವ ಕುರಿತು ಮಾನ್ಯ ಸದಸ್ಯರು ಶ್ರೀ ಪ್ರಸನ್ನ ಕುಮಾರ್ ಅವರು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಸದರಿ ಕರಡು ಪರಿನಿಯಮಾವಳಿಗಳು ಸರ್ಕಾರದಿಂದಲೇ ರಚಿಸಿ ಯಥಾವತ್ತಾಗಿ ಅಳವಡಿಸಿಕೊಳ್ಳಲು ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿರುವ ಕುರಿತು ಮಾನ್ಯ |

| | | | |
|---|---|---|---|
| | | | ಅಧ್ಯಕ್ಷರು ಮತ್ತು ಸಿ.ಡಿ.ಸಿ. ನಿರ್ದೇಶಕರು ವಿವರಿಸಿದರು. ತದನಂತರ, ಸದಸ್ಯರ ಅಭಿಪ್ರಾಯದಂತೆ ತಿದ್ದುಪಡಿ ಮಾಡಿ, ಪರಿನಿಯಮಾನವಳಿಯನ್ನು ಎಲ್ಲಾ ಸದಸ್ಯರುಗಳಿಗೆ ಪರಿಚಲನೆಯ ಮೂಲಕ ಅನುಮೋದನೆ ಪಡೆದು ನಂತರ ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸಲು ನಿರ್ಣಯಿಸಲಾಯಿತು. ಇನ್ನು ಮುಂದೆ ವಿಶ್ವವಿದ್ಯಾನಿಲಯದಲ್ಲಿ ಪರಿನಿಯಮಾವಳಿಗಳನ್ನು ರಚಿಸುವಾಗ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲು ಮಾನ್ಯ ಸದಸ್ಯರಾದ ಶ್ರೀ. ಟಿ.ಡಿ. ವಿನಯ್ ಅವರು ತಿಳಿಸಿದರು. |
| | | ಸಿಬ್ಬಂದಿ ವಿಭಾಗ | |
| 13 | 2019-20.ಸಾ.ಸಿಂ-06 ಸಿಬ್ಬಂದಿ ವಿಭಾಗ-01 | ಪ್ರೊ. ರಮೇಶ್. ಬಿ., ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಕಾರ್ಯ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರು ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯದ ಕುಲಸಚಿವರು (ಮೌಲ್ಯಮಾಪನ) ಹುದ್ದೆಗೆ ನೇಮಕಗೊಂಡ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರ ಹುದ್ದೆಯ ಸೇವೆಯಿಂದ ಬಿಡುಗಡೆ ಮಾಡಿರುವ ಕುರಿತು. | ಪ್ರೊ. ರಮೇಶ್. ಬಿ., ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಕಾರ್ಯ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರು ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯದ ಕುಲಸಚಿವರು (ಮೌಲ್ಯಮಾಪನ) ಹುದ್ದೆಗೆ ನೇಮಕಗೊಂಡ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರ ಹುದ್ದೆಯ ಸೇವೆಯಿಂದ ಬಿಡುಗಡೆ ಮಾಡಿರುವ ಕ್ರಮವನ್ನು ಸ್ಥಿರೀಕರಿಸಿತು. |
| 14 | 2019-20.ಸಾ.ಸಿಂ-06 ಸಿಬ್ಬಂದಿ ವಿಭಾಗ-02 | ಡಾ. ಶ್ರೀನಿವಾಸ ಎಸ್., ಸಹ ಪ್ರಾಧ್ಯಾಪಕರು, ಸ್ನಾತಕ ರಸಾಯನಶಾಸ್ತ್ರ ವಿಭಾಗ ಇವರು ಬೆಂಗಳೂರಿನ ನ್ಯಾಕ್ ಕಚೇರಿಯ ಡೆಪ್ಯೂಟಿ ಅಡ್ವೈಸರ್ ಹುದ್ದೆಗೆ ನಿಯೋಜನೆ ಮೇಲೆ ನೇಮಕಗೊಂಡ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಸೇವೆಯಿಂದ ಬಿಡುಗಡೆ ಮಾಡಿರುವ ಕುರಿತು. | ಡಾ. ಶ್ರೀನಿವಾಸ ಎಸ್., ಸಹ ಪ್ರಾಧ್ಯಾಪಕರು, ಸ್ನಾತಕ ರಸಾಯನಶಾಸ್ತ್ರ ವಿಭಾಗ ಇವರು ಬೆಂಗಳೂರಿನ ನ್ಯಾಕ್ ಕಚೇರಿಯ ಡೆಪ್ಯೂಟಿ ಅಡ್ವೈಸರ್ ಹುದ್ದೆಗೆ ನಿಯೋಜನೆ ಮೇಲೆ ನೇಮಕಗೊಂಡ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಸೇವೆಯಿಂದ ಬಿಡುಗಡೆ ಮಾಡಿರುವ ಕ್ರಮವನ್ನು ಸ್ಥಿರೀಕರಿಸಿತು. |
| 15 | 2019-20.ಸಾ.ಸಿಂ-06 ಸಿಬ್ಬಂದಿ ವಿಭಾಗ-03 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ವಿವಿಧ ವೃಂದಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳ ಜೇಷ್ಠತಾ ಪಟ್ಟಿ ಅಧಿಸೂಚಿಸುವ ಕುರಿತು. | ದಿನಾಂಕ 03.03.2020 ರ ಡೀನರ ಸಮಿತಿಯ ಶಿಫಾರಸ್ಸಿನನ್ವಯ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ವಿವಿಧ ವೃಂದಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳ ಜೇಷ್ಠತಾ ಪಟ್ಟಿಯನ್ನು ಅಧಿಸೂಚಿಸಲು ಅನುಮೋದಿಸಿತು. |
| | | ಪರೀಕ್ಷಾ ವಿಭಾಗ | |
| 16 | 2019-20.ಸಾ.ಸಿಂ-06 ಪರೀಕ್ಷಾ ವಿಭಾಗ-01 | ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣದ ವೆಚ್ಚವನ್ನು ಪಾವತಿಸುವ ಕುರಿತು. | ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣಕ್ಕೆ ಸಂಬಂಧಿಸಿದಂತೆ ಎರಡು ವರ್ಷಗಳಿಂದ ಪ್ರಸ್ತುತ ಸಂಸ್ಥೆಯೊಂದಿಗೆ ದರಗಳನ್ನು ಹೆಚ್ಚಿಸದೆ ದರ ಕರಾರು ಒಪ್ಪಂದವನ್ನು ಮುಂದುವರೆಸಿಕೊಂಡು ಬಂದಿರುವುದನ್ನು ಮಾನ್ಯ ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಸದರಿ ವಿಷಯವ ಬಗ್ಗೆ ಚರ್ಚಿಸಿದ ಸಭೆಯ ರೂ. 3,43,625-00 ಗಳನ್ನು ಸಂಬಂಧಪಟ್ಟ ಸಂಸ್ಥೆಗೆ ಪಾವತಿಸಲು ಅನುಮೋದಿಸಿತು. |
| 17 | 2019-20.ಸಾ.ಸಿಂ-06 ಪರೀಕ್ಷಾ ವಿಭಾಗ-02 | ವಿವಿಧ ಸ್ನಾತಕ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾದ ವಿದ್ಯಾರ್ಥಿಗಳನ್ನು ವಿಚಾರಣಾ ಸಮಿತಿಯ ಮುಂದೆ ವಿಚಾರಣೆ ಒಳಪಡಿಸಲಾಗಿದ್ದು, ಸದರಿ ಸಭೆಯ ನಡವಳಿಯ ಕುರಿತು. | ಸದರಿ ವಿಷಯದ ಬಗ್ಗೆ ಕುಲಸಚಿವರು (ಪರೀಕ್ಷಾಂಗ) ರವರು ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾದ ವಿದ್ಯಾರ್ಥಿಗಳಿಗೆ ವಿಚಾರಣಾ ಸಮಿತಿಯು ಕೈಗೊಂಡಿರುವ ಕ್ರಮವನ್ನು ಸಭೆಯ ಗಮನಕ್ಕೆ ತಂದರು. ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ವಿಚಾರಣಾ ಸಮಿತಿಯ ನಡಾವಳಿಯಲ್ಲಿನ |

| | | | |
|---|---|---|---|
| | | | ಅಂಶವನ್ನು ಒಪ್ಪಬಹುದು ಎಂದು ವಿದ್ಯಾ ವಿಷಯಕ ಪರಿಷತ್ತಿನ ಶಿಫಾರಸ್ಸನ್ನು ಅನುಮೋದಿಸಿತು. ಮುಂದುವರೆದು, ಮಾನ್ಯ ಸದಸ್ಯರುಗಳಾದ ಶ್ರೀ ಪ್ರಸನ್ನ ಕುಮಾರ್ ಹಾಗೂ ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ ಇವರುಗಳು "ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾದ ವಿದ್ಯಾರ್ಥಿಗಳ ವಿರುದ್ಧ ವಿಚಾರಣೆ ಮತ್ತು ಅಗತ್ಯ ಕ್ರಮವಹಿಸುವ ಕುರಿತು ತುಮಕೂರು ವಿಶ್ವವಿದ್ಯಾನಿಲಯದ ಮಾರ್ಗಸೂಚಿ/ ಪರಿನಿಯಮವನ್ನು ರಚಿಸಲು ಸಲಹೆ ನೀಡಿದರು. ಈ ಸಂಬಂಧ ತುಮಕೂರು ವಿಶ್ವವಿದ್ಯಾನಿಲಯದ ಮಾರ್ಗಸೂಚಿ/ ಪರಿನಿಯಮವನ್ನು ಸಿದ್ಧಪಡಿಸಲು ಇಬ್ಬರು ವಿದ್ಯಾ ವಿಷಯಕ ಪರಿಷತ್ ಸದಸ್ಯರುಗಳು, ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ಪ್ರಸನ್ನ ಕುಮಾರ್ ಮತ್ತು ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ ರವರು, ಕುಲಸಚಿವರು (ಪರೀಕ್ಷಾಂಗ) ಮತ್ತು ಇಬ್ಬರು ಪ್ರಾಂಶುಪಾಲರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಲು ನಿರ್ಣಯಿಸಲಾಯಿತು. |
| **ಹಣಕಾಸು ವಿಭಾಗ** | | | |
| 18 | 2019-20.ಸಾ.ಸಿಂ-06<br>ಹಣಕಾಸು ವಿಭಾಗ-01 | 2018-19ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನಾ ಮತ್ತು ಲೆಕ್ಕಪತ್ರ ಇಲಾಖೆ, ಇವರಿಗೆ ಕಳುಹಿಸಿದ್ದು, ಸ್ಥಿರೀಕರಣ ಕೋರುವ ಕುರಿತು. | 2018-19ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನಾ ಮತ್ತು ಲೆಕ್ಕಪತ್ರ ಇಲಾಖೆ ಇವರಿಗೆ ಕಳುಹಿಸಿರುವ ಕ್ರಮವನ್ನು ಸ್ಥಿರೀಕರಿಸಿತು. |
| **ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ** | | | |
| 19 | 2019-20.ಸಾ.ಸಿಂ-06<br>ಸಾ & ಅ ವಿಭಾಗ-01 | ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದ ಕ್ಲರ್ಕ್ ಕಂ ಟೈಪಿಸ್ಟ್ (ತಾತ್ಕಾಲಿಕ) ರ ಸೇವೆಯನ್ನು ಮುಂದುವರೆಸಿರುವುದನ್ನು ಸ್ಥಿರೀಕರಿಸುವ ಕುರಿತು. | ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದ ಕ್ಲರ್ಕ್ ಕಂ ಟೈಪಿಸ್ಟ್ (ತಾತ್ಕಾಲಿಕ) ರ ಸೇವೆಯನ್ನು ಮುಂದುವರೆಸಿರುವ ಕ್ರಮವನ್ನು ಸ್ಥಿರೀಕರಿಸಿತು. |
| 20 | 2019-20.ಸಾ.ಸಿಂ-06<br>ಸಾ & ಅ ವಿಭಾಗ-02 | ತುಮಕೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ಅವಶ್ಯವಿರುವ ಮುದ್ರಿತ ಲೇಖನ ಸಾಮಗ್ರಿಗಳನ್ನು ಸರಬರಾಜು ಪಡೆಯುವ ಸಂಬಂಧ | ತುಮಕೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ಅವಶ್ಯವಿರುವ ಮುದ್ರಿತ ಲೇಖನ ಸಾಮಗ್ರಿಗಳನ್ನು ಸರಬರಾಜು ಪಡೆಯುವ ಸಂಬಂಧ ಎಲ್-1 ಸರಬರಾಜುದಾರರ ದರಸಂದಾನ ಮಾಡಿದ ದರಗಳ ಬಗ್ಗೆ ಮಾನ್ಯ ಅಧ್ಯಕ್ಷರು ಸಭೆಗೆ ಮಾಹಿತಿ ನೀಡಿದರು. ಈ ಸಂಬಂಧ ಸದಸ್ಯರಾದ ಶ್ರೀ ಟಿ.ಡಿ. ವಿನಯ್ ಹಾಗೂ ಕು. ಐಶ್ವರ್ಯಸುರೇಶ್ ರವರು ಕಾರ್ಯಸೂಚಿಯನ್ನು ಕಳುಹಿಸುವಾಗ ಅಗತ್ಯ ಟೆಂಡರ್ ನಡಾವಳಿಗಳು ಹಾಗೂ ಇತರೆ ದಾಖಲೆಗಳನ್ನು ನೀಡುವಂತೆ ತಿಳಿಸಿದರು. ಮುಂದುವರೆದು, ಮಾನ್ಯ ಸದಸ್ಯರಾದ ಶ್ರೀ ಪ್ರಸನ್ನ ಕುಮಾರ್ ಹಾಗೂ ಶ್ರೀ ಶ್ರೀನಿವಾಸ್ ಆರ್.ಕೆ., ಅವರು ಕಾರ್ಯಸೂಚಿಯಲ್ಲಿ ಎಲ್ಲಾ ಉಲ್ಲೇಖ ಮತ್ತು ಮಾಹಿತಿಗಳನ್ನು ನಮೂದಿಸುವಂತೆ ತಿಳಿಸಿದರು. ಈ ಸಂಬಂಧ ಎಲ್ಲಾ ಮಾಹಿತಿ ಮತ್ತು ದಾಖಲೆಗಳನ್ನು ಒಳಗೊಂಡಂತೆ ಕಾರ್ಯಸೂಚಿಯನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಸಭೆಯು ತೀರ್ಮಾನಿಸಿತು. |
| 21 | 2019-20.ಸಾ.ಸಿಂ-06<br>ಸಾ & ಅ ವಿಭಾಗ-03 | ಮೆ. ಹೈಟೆಕ್ ಪ್ರಿಂಟ್ ಸಿಸ್ಟಮ್ಸ್ ಲಿಮಿಟೆಡ್, ಬೆಂಗಳೂರು ಇವರಿಗೆ ಹಣ ಪಾವತಿಸುವ ಕುರಿತು. | ಮೆ. ಹೈಟೆಕ್ ಪ್ರಿಂಟ್ ಸಿಸ್ಟಮ್ಸ್ ಲಿಮಿಟೆಡ್, ಬೆಂಗಳೂರು ಇವರಿಗೆ ಹಣ ಪಾವತಿಸುವ ಕುರಿತು ಎಲ್ಲಾ ಮಾಹಿತಿ ಮತ್ತು ದಾಖಲೆಗಳನ್ನು ಒಳಗೊಂಡಂತೆ ಕಾರ್ಯಸೂಚಿಯನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಸಭೆಯು ತೀರ್ಮಾನಿಸಿತು. |

| | | | |
|---|---|---|---|
| 22 | 2019-20.ಸಾ.ಸಿಂ-06<br>ಸಾ & ಅ ವಿಭಾಗ-04 | ಮೆ. ಶ್ರೀ ಸಿದ್ದೇಶ್ವರ ಖಾನಾವಳಿ, ಸಚಿನ್ ಎಮ್., ಚಿತ್ರದುರ್ಗ ಇವರಿಗೆ ಹಣ ಪಾವತಿಸಿರುವ ಕುರಿತು. | ಮೆ. ಶ್ರೀ ಸಿದ್ದೇಶ್ವರ ಖಾನಾವಳಿ, ಸಚಿನ್ ಎಮ್., ಚಿತ್ರದುರ್ಗ ಇವರಿಗೆ ಹಣ ಪಾವತಿಸಿರುವ ಕ್ರಮವನ್ನು ಸ್ಥಿರೀಕರಿಸಿತು. |
| 23 | 2019-20.ಸಾ.ಸಿಂ-06<br>ಸಾ & ಅ ವಿಭಾಗ-05 | ವಿಶ್ವವಿದ್ಯಾನಿಲಯದ ಅತಿಥಿ ಉಪನ್ಯಾಸಕರ ಗೌರವ ಸಂಭಾವನೆಯನ್ನು ಹೆಚ್ಚಿಸುವ ಕುರಿತು. | ಸದರಿ ವಿಷಯಕ್ಕೆ ಸಂಬಂಧಿಸಿದಂತೆ, 2019-20ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ವಿಭಾಗ ಹಾಗೂ ಘಟಕ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸಿದ್ದ ಅತಿಥಿ ಉಪನ್ಯಾಸಕರ ಅಂಕಿ ಅಂಶಗಳ ಮಾಹಿತಿ ನೀಡಿ, ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಕಾರ್ಯಭಾರವನ್ನು ಪರಿಶೀಲಿಸಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವ ಬಗ್ಗೆ ಮಾಹಿತಿ ನೀಡಿದರು. ಪ್ರಸ್ತುತ ಅತಿಥಿ ಉಪನ್ಯಾಸಕರುಗಳಿಗೆ ಪಾವತಿಸಲಾಗುತ್ತಿರುವ ಗೌರವ ಸಂಭಾವನೆಯ ಬಗ್ಗೆ ಮಾನ್ಯ ಕುಲಪತಿಗಳು ಮಾಹಿತಿಯನ್ನು ಸಭೆಗೆ ನೀಡಿದರು. ಆರ್ಥಿಕ ಪರಿಸ್ಥಿತಿ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಅರಿತು ಗೌರವ ಸಂಭಾವನೆಯನ್ನು ಹೆಚ್ಚಿಸಲು ಕ್ರಮಕೈಗೊಳ್ಳುವ ಬಗ್ಗೆ ಚರ್ಚಿಸಲಾಯಿತು. ವಿವಿಧ ವಿಶ್ವವಿದ್ಯಾನಿಲಯಗಳಿಗೆ ಆಯಾ ವಿಶ್ವವಿದ್ಯಾನಿಲಯಗಳಲ್ಲಿ ಪಾವತಿಸಲಾಗುತ್ತಿರುವ ಗೌರವ ಸಂಭಾವನೆಯ ಮಾಹಿತಿಯನ್ನು ಪಡೆದು, ನಂತರ ವಿಶ್ವವಿದ್ಯಾನಿಲಯದ ಅನುದಾನದ ಲಭ್ಯತೆಯ ಆಧಾರದ ಮೇಲೆ ಮುಂದಿನ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ಅಗತ್ಯ ಕ್ರಮವಹಿಸಲಾಗುವುದೆಂದು ಮಾನ್ಯ ಅಧ್ಯಕ್ಷರು ತಿಳಿಸಿದರು. |
| 24 | 2019-20.ಸಾ.ಸಿಂ-06<br>ಸಾ & ಅ ವಿಭಾಗ-06 | ವಿಶ್ವವಿದ್ಯಾನಿಲಯದ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ನೀಡುವ ಕುರಿತು. | ವಿಶ್ವವಿದ್ಯಾನಿಲಯದ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ನೀಡುವ ಕುರಿತು ಎಸ್‌ಸಿಪಿ/ ಟಿಎಸ್‌ಪಿ ಅನುದಾನದಲ್ಲಿ ಅವಕಾಶವಿದ್ದಲ್ಲಿ ಲ್ಯಾಪ್‌ಟಾಪ್ ಒದಗಿಸಲು ಹಾಗೂ ಸರ್ಕಾರದಿಂದ ಹಿಂದುಳಿದ ವರ್ಗಗಳಿಗೆ ಅನುದಾನ ಬಂದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಒದಗಿಸಲು ಸದಸ್ಯರಾದ ಶ್ರೀ ಸುನಿಲ್ ಪ್ರಸಾದ್ ಟಿ.ಎಸ್. ಮತ್ತು ಶ್ರೀ ಶ್ರೀನಿವಾಸ್ ಆರ್.ಕೆ., ಅವರು ತಿಳಿಸಿದರು. ಸರ್ಕಾರದಿಂದ ಅನುದಾನವನ್ನು ಮಂಜೂರು ಮಾಡಿದಲ್ಲಿ ಅಗತ್ಯ ಕ್ರಮವಹಿಸಲಾಗುವುದೆಂದು ಮಾನ್ಯ ಅಧ್ಯಕ್ಷರು ತಿಳಿಸಿದರು. ಶ್ರೀ ಸುನಿಲ್ ಪ್ರಸಾದ್ ಟಿ.ಎಸ್. ಹಾಗೂ ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ ಅವರು ಎಸ್.ಸಿ.ಪಿ./ ಟಿ.ಎಸ್.ಪಿ ಅನುದಾನದಡಿಯಲ್ಲಿ ಎಲ್ಲಾ ಎಸ್.ಸಿ/ಎಸ್.ಟಿ. ವಿದ್ಯಾರ್ಥಿಗಳಿಗೆ ಕೂಡಲೇ ಫೆಲೋಶಿಪ್ ಬಿಡುಗಡೆ ಮಾಡಬೇಕು ಎಂದು ತಿಳಿಸಿದರು. ತಕ್ಷಣವೇ ಸಂಶೋಧನಾ ವಿದ್ಯಾರ್ಥಿಗಳಿಗೆ ಫೆಲೋಶಿಪ್ ಅತ್ಯಂತ ಅವಶ್ಯಕವಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು. ಸದರಿ ಮಾಹಿತಿಯೊಂದಿಗೆ ಸಂಶೋಧನಾ ವಿದ್ಯಾರ್ಥಿಗಳಿಗೆ ಫೆಲೋಶಿಪ್ ನೀಡುವ ಕುರಿತು ಚರ್ಚಿಸಲಾಯಿತು. ಸಂಶೋಧನಾ ವಿದ್ಯಾರ್ಥಿಗಳಿಗೆ ಎಸ್.ಸಿ.ಪಿ./ ಟಿ.ಎಸ್.ಪಿ ಫೆಲೋಶಿಪ್‌ಗಳ ಬಿಡುಗಡೆ ಮಾಡುವ ಬಗ್ಗೆ ಕುಲಸಚಿವರಿಗೆ ಕುಲಪತಿಗಳು ಸಭೆಯಲ್ಲೇ ಸೂಚಿಸಿ, ನಿರ್ಣಯ ಕೈಗೊಳ್ಳಲಾಯಿತು. ಎಸ್.ಸಿ.ಪಿ./ ಟಿ.ಎಸ್.ಪಿ ಅನುದಾನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕುಲಸಚಿವರು ಮುಂದಿನ ಸಭೆಗೆ |

| | | | |
|---|---|---|---|
| | | | ಒದಗಿಸುವರೆಂದು ಮಾನ್ಯ ಅಧ್ಯಕ್ಷರು ತಿಳಿಸಿದರು. ಮುಂದಿನ ದಿನಗಳಲ್ಲಿ ಸಿಂಡಿಕೇಟ್ ಸಭೆಗೆ ಮಂಡಿಸುವಾಗ ಎಲ್ಲಾ ಅಗತ್ಯ ದಾಖಲೆ ಮತ್ತು ಮಾಹಿತಿಗಳೊಂದಿಗೆ ಮಂಡಿಸುವಂತೆ ನಿರ್ಣಯಿಸಲಾಯಿತು. |
| 25 | 2019-20.ಸಾ.ಸಿಂ-06<br>ಸಾ & ಅ ವಿಭಾಗ-07 | ವಿಶ್ವವಿದ್ಯಾನಿಲಯದಲ್ಲಿನ ವಿವಿಧ ಅಧ್ಯಯನ ಪೀಠಗಳ ಕಾರ್ಯಚಟುವಟಿಕೆಗಳ ಕುರಿತು. | ವಿಶ್ವವಿದ್ಯಾನಿಲಯದಲ್ಲಿನ ವಿವಿಧ ಅಧ್ಯಯನ ಪೀಠಗಳ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಕುಲಸಚಿವರು ಸಭೆಗೆ ನೀಡಿದರು ಹಾಗೂ ಮಾನ್ಯ ಸಿಂಡಿಕೇಟ್ ಸದಸ್ಯರುಗಳು ತಮ್ಮ ಸಲಹೆಗಳು ಅಥವಾ ಮಾರ್ಗದರ್ಶನವನ್ನು ನೀಡಿದಲ್ಲಿ ಅವುಗಳನ್ನು ಅಳವಡಿಸಿಕೊಂಡು ಕಾರ್ಯರೂಪಕ್ಕೆ ತರಲಾಗುವುದೆಂದು ಕುಲಸಚಿವರು ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸ್ ಆರ್.ಕೆ., ಅವರು ವಿಶ್ವವಿದ್ಯಾನಿಲಯದಲ್ಲಿನ ವಿವಿಧ ಅಧ್ಯಯನ ಪೀಠಗಳ ಕಾರ್ಯಚಟುವಟಿಕೆಗಳ ಫಲಾನುಭವಿಗಳ ಮಾಹಿತಿ ಮತ್ತು ಇತರೆ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಮಾಹಿತಿಗಳನ್ನು ನೀಡುವಂತೆ ತಿಳಿಸಿದರು. ಮಾನ್ಯ ಅಧ್ಯಕ್ಷರು ತುಮಕೂರು ವಿಶ್ವವಿದ್ಯಾನಿಲಯ ಮತ್ತು ಇತರೆ ವಿಶ್ವವಿದ್ಯಾನಿಲಯಗಳ ವಿವಿಧ ಅಧ್ಯಯನ ಪೀಠಗಳ ಕಾರ್ಯಚಟುವಟಿಕೆಗಳ ಬಗ್ಗೆ ಹಾಗೂ ಈ ಸಂಬಂಧ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ನೀಡಿರುವ ಸೂಚನೆಗಳ ಬಗ್ಗೆ ವಿವರಿಸಿದರು. ಸದರಿ ಪೀಠಗಳ ಕಾರ್ಯಪ್ರಕ್ರಿಯೆಗೆ ಸಿಂಡಿಕೇಟ್ ಸದಸ್ಯರುಗಳನ್ನೊಳಗೊಂಡ ಸಲಹಾ ಸಮಿತಿಗಳನ್ನು ಶೀಘ್ರದಲ್ಲಿ ರಚಿಸಿ ಅಗತ್ಯ ಕ್ರಮವಹಿಸುವಂತೆ ತಿಳಿಸಿದರು. ಮುಂದುವರೆದು, ಸದಸ್ಯರಾದ ಶ್ರೀ ಸುನಿಲ್ ಪ್ರಸಾದ್ ಟಿ.ಎಸ್., ಅವರು ಅಧ್ಯಯನ ಪೀಠಗಳಿಗೆ ನಿಗದಿಯಾಗಿರುವ ಶೈಕ್ಷಣಿಕ/ ಸಂಶೋಧನಾ ಚಟುವಟಿಕೆಗಳಿಗೆ ಹಣವನ್ನು ಉಪಯೋಗಿಸಿಕೊಳ್ಳುವಂತೆ ತಿಳಿಸಿದರು. ಮುಂದುವರೆದು, ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಯನ ಪೀಠಗಳು ವಿಶ್ವವಿದ್ಯಾನಿಲಯದ ಆವರಣದಲ್ಲಿಯೇ ಕಾರ್ಯನಿರ್ವಹಿಸುವುದು ಎಂದು ತಿಳಿಸಿದರು.<br><br>ಡಾ. ಜಿ.ಎಸ್. ಪರಮಶಿವಯ್ಯ ಅಧ್ಯಯನ ಪೀಠದ ಸ್ಥಳಾಂತರ/ ಜಾಗಕ್ಕೆ ಸಂಬಂಧಿಸಿದಂತೆ ಸಿಂಡಿಕೇಟ್ ಗಮನಕ್ಕೆ ಬಾರದೇ ಅನುಮತಿ ಪಡೆಯದೇ ನಿರ್ಧಾರ ತೆಗೆದುಕೊಂಡಿರುವುದು ಸರಿಯಲ್ಲ. ಆದ್ದರಿಂದ ತಕ್ಷಣವೇ ವಿಶ್ವವಿದ್ಯಾನಿಲಯದ ಆವರಣವನ್ನು ಹೊರತುಪಡಿಸಿ ಬೇರೆಡೆ ಜಮೀನು ಮಂಜೂರು ಮಾಡುತ್ತಿರುವ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲು ಹಾಗೂ ಸಿಂಡಿಕೇಟ್‌ನಲ್ಲಿ ಚರ್ಚಿಸಿ ಅನುಮತಿ ಪಡೆದು ಕಾನೂನು ರೀತಿಯಲ್ಲಿ ಪ್ರಕ್ರಿಯೆ ಮಾಡಲು ನಿರ್ಣಯಿಸಲಾಯಿತು. ಅವಶ್ಯವಿದ್ದಲ್ಲಿ ಈ ಬಗ್ಗೆ ಸಂಪೂರ್ಣ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟ್ ಸಭೆಗೆ ಕಾರ್ಯಸೂಚಿಯನ್ನು ಮಂಡಿಸಲು ಮಾನ್ಯ ಸದಸ್ಯರಾದ ಶ್ರೀ ಸುನಿಲ್ ಪ್ರಸಾದ್ ಟಿ.ಎಸ್. ಇವರು ತಿಳಿಸಿದರು. ಮುಂದುವರೆದು, |

| | | | |
|---|---|---|---|
| | | | ಡಾ. ಜಿ.ಎಸ್. ಪರಮಶಿವಯ್ಯ ಅಧ್ಯಯನ ಪೀಠಕ್ಕೆ ಸಂಬಂಧಿಸಿದಂತೆ, ನೇಮಕಗೊಂಡಿರುವ ನಿರ್ದೇಶಕರು ಬಾಹ್ಯ ಅಧಿಕಾರಿಯಾಗಿರುವುದರಿಂದ ಅವರ ಅವಧಿಯನ್ನು ಒಂದು ವರ್ಷಕ್ಕೆ ನಿಗಧಿಪಡಿಸಲು ನಿರ್ಣಯಿಸಲಾಯಿತು. |
| | | ಶೈಕ್ಷಣಿಕ ವಿಭಾಗ | |
| 26 | 2019–20.ಸಾ.ಸಿಂ–06 ಶೈ.ವಿಭಾಗ–12 | ತಿಪಟೂರಿನಲ್ಲಿ PG Diploma in Coconut Plantation Management & Processing ಕೋರ್ಸ್‌ನ್ನು ಪ್ರಾರಂಭಿಸುವ ಕುರಿತು. | PG Diploma in Coconut Plantation Management & Processing ಕೋರ್ಸ್‌ಗೆ ಸಂಬಂಧಿಸಿದಂತೆ, ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಬಂದಲ್ಲಿ ಸದರಿ ಕೋರ್ಸ್‌ನ್ನು ಹಾಗೂ ಪಿ.ಜಿ. ಸೆಂಟರ್‌ನಲ್ಲಿರುವ ಎಂ.ಕಾಂ. ಕೋರ್ಸ್‌ನ್ನು ಮೂಲಭೂತ ಸೌಕರ್ಯ ಹಾಗೂ ಆಯವ್ಯಯಗಳನ್ನು ಪರಿಶೀಲಿಸಿ, ತಿಪಟೂರಿನ ಎ.ಪಿ.ಎಂ.ಸಿ. ಆವರಣದ ಕಟ್ಟಡದಲ್ಲಿ ಪ್ರಾರಂಭಿಸಲು ಒಪ್ಪಬಹುದು ಎಂಬ ವಿದ್ಯಾ ವಿಷಯಕ ಪರಿಷತ್ತಿನ ಶಿಫಾರಸ್ಸನ್ನು ಸಭೆಯು ಅನುಮೋದಿಸಿತು. ಮುಂದುವರೆದು, ತಿಪಟೂರಿನ ಕ್ಷೇತ್ರ ಭಾಗದಲ್ಲಿನ ವಿದ್ಯಾರ್ಥಿಗಳಿಗೆ ಸದರಿ ಕೋರ್ಸಿನ ಕುರಿತು ಹೆಚ್ಚಿನ ಮಾಹಿತಿಯನ್ನು ಪ್ರಚುರಪಡಿಸಿದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರವೇಶಾತಿಯನ್ನು ಪಡೆಯುವ ಸಾಧ್ಯತೆಗಳು ಇದ್ದು, ಈ ನಿಟ್ಟಿನಲ್ಲಿ ಅಗತ್ಯ ಕ್ರಮವಹಿಸಬೇಕು ಎಂದು ಮಾನ್ಯ ಸದಸ್ಯರಾದ ಡಾ. ಭಾಗ್ಯಲಕ್ಷ್ಮೀ, ಶ್ರೀ ರಾಜು, ಕು. ಐಶ್ವರ್ಯಸುರೇಶ್ ಮತ್ತು ಶ್ರೀ ಸುನಿಲ್ ಪ್ರಸಾದ್ ಟಿ.ಎಸ್., ಅವರು ತಿಳಿಸಿದರು. ಇಂತಹ ನವೀನ ಕೋರ್ಸುಗಳಿಗೆ ಸಂಬಂಧಿಸಿದಂತೆ ಹಾಗೂ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಉದ್ಯೋಗಾವಕಾಶವನ್ನು ಸೃಷ್ಟಿಸುವ ನಿಟ್ಟಿನಲ್ಲಿ ಹೊಸ ಕೋರ್ಸುಗಳನ್ನು ಪ್ರಾರಂಭಿಸಲು ಒಂದು ಪರಿಣಿತರ ಸಮಿತಿಯನ್ನು ತಕ್ಷಣವೇ ರಚಿಸಲು ನಿರ್ಣಯಿಸಲಾಯಿತು. |
| | | ಸಿಬ್ಬಂದಿ ವಿಭಾಗ | |
| 27 | 2019–20.ಸಾ.ಸಿಂ–06 ಸಿಬ್ಬಂದಿ ವಿಭಾಗ–04 | ವಿಶ್ವವಿದ್ಯಾನಿಲಯದಲ್ಲಿ ಹಂಗಾಮಿ ಸಂಚಿತ ವೇತನದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಬಂಧ. | ವಿಶ್ವವಿದ್ಯಾನಿಲಯದಲ್ಲಿ ಹಂಗಾಮಿ ಸಂಚಿತ ವೇತನದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಖಾಯಂಗೊಳಿಸುವ ಸಂಬಂಧ ಅಗತ್ಯ ಮಾಹಿತಿಗಳನ್ನು ಮಾನ್ಯ ಅಧ್ಯಕ್ಷರು ಸದಸ್ಯರುಗಳಿಗೆ ನೀಡಿದರು ಹಾಗೂ ಸರ್ಕಾರದಿಂದ ವಿಶ್ವವಿದ್ಯಾನಿಲಯಕ್ಕೆ ಹಂಗಾಮಿ ಸಂಚಿತ ವೇತನದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಖಾಯಂಗೊಳಿಸಲು ಅವಕಾಶವಿಲ್ಲವೆಂದು ತಿಳಿಸುತ್ತಾ ವಿಶ್ವವಿದ್ಯಾನಿಲಯದ ಪ್ರಸ್ತಾವನೆಗಳನ್ನು ಹಿಂದಿರುಗಿಸಿರುವ ಕುರಿತು ಮಾಹಿತಿಗಳನ್ನು ಮಾನ್ಯ ಅಧ್ಯಕ್ಷರು ನೀಡಿದರು. ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಸಂಚಿತವೇತನದಡಿಯಲ್ಲಿ ನೇಮಕ ಮಾಡಿಕೊಳ್ಳಲು ಅವಕಾಶವಿಲ್ಲವೆಂದು ತಿಳಿಸಿರುವ ಸರ್ಕಾರದ ಪತ್ರಗಳ ಬಗ್ಗೆ ಮಾಹಿತಿಯನ್ನು ಮಾನ್ಯ ಅಧ್ಯಕ್ಷರು ಸಿಂಡಿಕೇಟ್ ಸಭೆಗೆ ಸಲ್ಲಿಸಿದರು. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಹಂಗಾಮಿ |

| | | | |
|---|---|---|---|
| | | | ಸಂಚಿತವೇತನ ನೌಕರರನ್ನು ಖಾಯಂಗೊಳಿಸುವ ಸಂಬಂಧ ತುಮಕೂರು ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟ್ ಸದಸ್ಯರುಗಳು ಸರ್ಕಾರದ ಹಂತದಲ್ಲಿ ಅಗತ್ಯಕ್ರಮವಹಿಸುವುದಾಗಿ ಸಿಂಡಿಕೇಟ್ ಸದಸ್ಯರುಗಳು ತಿಳಿಸಿದರು. ಈ ಸಂಬಂಧ ಶ್ರೀ ಟಿ.ಡಿ. ವಿನಯ್ ರವರ ಅಧ್ಯಕ್ಷತೆಯಲ್ಲಿ ಸಿಂಡಿಕೇಟ್ ಸದಸ್ಯರುಗಳನ್ನೊಳಗೊಂಡ ಉಪಸಮಿತಿಯನ್ನು ತಮ್ಮ ಹಂತದಲ್ಲಿಯೇ ರಚಿಸಿಕೊಳ್ಳುವುದಾಗಿ ಹಾಗೂ ಸರ್ಕಾರಕ್ಕೆ ಮನವಿ ಸಲ್ಲಿಸಿ ಅಗತ್ಯ ಕ್ರಮವಹಿಸುವುದಾಗಿ ಶ್ರೀ ಟಿ.ಡಿ. ವಿನಯ್ ಅವರು ತಿಳಿಸಿದರು. |
| 28 | 2019-20.ಸಾ.ಸಿಂ-06<br>ಸಿಬ್ಬಂದಿ ವಿಭಾಗ-05 | ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ಹಾಗೂ ಖಾಲಿ ಇರುವ ಹುದ್ದೆಗಳ ಕುರಿತು. | ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ಹಾಗೂ ಖಾಲಿ ಇರುವ ಹುದ್ದೆಗಳ ಮಾಹಿತಿಯನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಮುಂದುವರೆದು ದಿನಾಂಕ 20.07.2020 ರಂದು ನಡೆದ 2ನೇ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಅಧ್ಯಾಪಕರುಗಳ ನಿಯೋಜನೆ ಸಂಬಂಧ ಕೈಗೊಂಡಿರುವ ನಿರ್ಣಯವನ್ನು ಸಭೆಯ ಗಮನಕ್ಕೆ ತಂದರು. ಹಾಗೂ ಕೆಲವು ತಿಂಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಸರ್ಕಾರದಿಂದ ನಿರ್ದೇಶನ ಬಂದಲ್ಲಿ ನೇಮಕಾತಿ ಮಾಡಲಾಗುವುದು ಎಂದು ತಿಳಿಸಿದರು. ಈ ಸಂಬಂಧ ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್., ರವರು ನೇರ ನೇಮಕಾತಿ ಮಾಡುವ ಪೂರ್ವದಲ್ಲಿ ಒಂದು ಸಮಿತಿಯನ್ನು ರಚಿಸಿ ಯಾವ ಯಾವ ಅಧ್ಯಾಪಕರುಗಳು ಯಾವ ಯಾವ ಹುದ್ದೆಗಳಿಗೆ (ಸ್ನಾತಕ ಮತ್ತು ಸ್ನಾತಕೋತ್ತರ) ನೇಮಕವಾಗಿರುತ್ತಾರೆಂಬುದರ ಬಗ್ಗೆ ಪರಿಶೀಲಿಸಿ ಎಲ್ಲಾ ಅಧ್ಯಾಪಕರುಗಳನ್ನು ಅವರವರ ಮೂಲ ಹುದ್ದೆಗಳಿಗೆ ಹಿಂದಿರುಗಿಸುವುದು ಸೂಕ್ತ ಎಂದು ತಿಳಿಸಿದರು. ಪ್ರಸ್ತುತ ವಿಶ್ವವಿದ್ಯಾನಿಲಯದ ನ್ಯಾಕ್ ಪ್ರಕ್ರಿಯೆ ಪ್ರಗತಿಯಲ್ಲಿರುವುದರಿಂದ, ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಬೋಧಕರನ್ನು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳಲ್ಲಿ ಮುಂದುವರೆಸಲು ನಿರ್ಣಯಿಸಲಾಯಿತು. |
| | | ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ | |
| 29 | 2019-20.ಸಾ.ಸಿಂ-06<br>ಸಾ & ಅ ವಿಭಾಗ-08 | ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಅಗತ್ಯವಿರುವ ಪ್ರಯೋಗಾಲಯ ಉಪಕರಣಗಳನ್ನು ಸರಬರಾಜು ಪಡೆಯುವ ಸಂಬಂಧ. | ಅಗತ್ಯ ಮಾಹಿತಿ ಮತ್ತು ದಾಖಲೆಗಳೊಂದಿಗೆ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸುವಂತೆ ಮಾನ್ಯ ಅಧ್ಯಕ್ಷರು ಕುಲಸಚಿವರಿಗೆ ಸೂಚಿಸಿದರು. |
| | | ಹಣಕಾಸು ವಿಭಾಗ | |
| 30 | 2019-20.ಸಾ.ಸಿಂ-06<br>ಹಣಕಾಸು ವಿಭಾಗ-02 | 2020-21ನೇ ಸಾಲಿನ ತುಮಕೂರು ವಿಶ್ವವಿದ್ಯಾನಿಲಯದ ಕರಡು ಆಯವ್ಯಯದ ಕುರಿತು. | 2020-21ನೇ ವಿಶ್ವವಿದ್ಯಾನಿಲಯದ ಅಂದಾಜು ಆಯವ್ಯಯವನ್ನು ಸಿದ್ಧಪಡಿಸಿರುವ ಬಗ್ಗೆ ಹಾಗೂ ಸಿದ್ಧಪಡಿಸಿರುವ ಸದರಿ ಆಯವ್ಯಯದಲ್ಲಿ ಸೇರಿಸಲಾಗಿರುವ Item wise receipt (ಅಂದಾಜು ಆದಾಯ ರೂ.12,995.48 ಲಕ್ಷಗಳು) ಮತ್ತು Details of Expenditure (ಅಂದಾಜು |

ವೆಚ್ಚಗಳು ರೂ. 12,982.14 ಲಕ್ಷಗಳು) ಗಳ ಬಗ್ಗೆ ಸವಿಸ್ತಾರವಾಗಿ ಹಣಕಾಸು ಅಧಿಕಾರಿಯವರು ಸಭೆಯ ಗಮನಕ್ಕೆ ತಂದರು. ಹಾಗೂ ಸದರಿ ಆಯವ್ಯಯವನ್ನು ದಿನಾಂಕ 12.05.2020 ರಂದು ಪರಿಚಲನೆ ಮೂಲಕ ಹಣಕಾಸು ಸಮಿತಿ ಮತ್ತು ದಿನಾಂಕ 19.05.2020 ರ ವಿದ್ಯಾ ವಿಷಯಕ ಪರಿಷತ್ತಿನ ಸಭೆಯಲ್ಲಿ ಅನುಮೋದನೆ ಆಗಿರುವುದನ್ನು ಸಭೆಯು ಅಂಗೀಕರಿಸಿತು.

ಹೊಸ ಕ್ಯಾಂಪಸ್ ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ ಮಂಜೂರಾದರೆ ಮಾತ್ರ ಅನುಕ್ರಮವಾಗಿ ಆಂತರಿಕ ಸಂಪನ್ಮೂಲದ ಅನುದಾನವನ್ನು ಉಪಯೋಗಿಸುವಂತೆ ಸಿಂಡಿಕೇಟ್ ಸದಸ್ಯರಾದ ಶ್ರೀ ಶ್ರೀನಿವಾಸ್ ಆರ್.ಕೆ., ಮತ್ತು ಶ್ರೀ ಸುನಿಲ್ ಪ್ರಸಾದ್ ಟಿ.ಎಸ್., ಅವರು ತಿಳಿಸಿದರು ಹಾಗೂ ಕೊವಿಡ್–19 ಹಿನ್ನೆಲೆಯಲ್ಲಿ ಯಾವುದೇ ಕಾಮಗಾರಿಗಳನ್ನು ಪ್ರಸಕ್ತ ವರ್ಷದಲ್ಲಿ ಕೈಗೊಳ್ಳದೇ ಮುಂದಿನ ವರ್ಷಗಳಲ್ಲಿ ಈ ಬಗ್ಗೆ ಚಿಂತಿಸಲು ನಿರ್ಣಯಿಸಲಾಯಿತು. ಪ್ರಸ್ತುತ ಹಣಕಾಸಿನ ಸಾಲಿನಲ್ಲಿ ಆಂತರಿಕ ಸಂಪನ್ಮೂಲವನ್ನು ನೂತನ ಕ್ಯಾಂಪಸ್ ಅಭಿವೃದ್ಧಿಗೆ ಉಪಯೋಗಿಸದಂತೆ ಕ್ರಮವಹಿಸಲು ತಿಳಿಸಿದರು. ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು 2020–21ನೇ ಸಾಲಿನ ಆಯವ್ಯಯದಲ್ಲಿ ಆಂತರಿಕ ಸಂಪನ್ಮೂಲದಿಂದ ಕ್ಯಾಂಪಸ್ ಅಭಿವೃದ್ಧಿಗೆ ಅವಕಾಶ ಕಲ್ಪಿಸದಂತೆ ಕ್ರಮವಹಿಸುವಂತೆ ತಿಳಿಸಿದರು. ಪ್ರಸ್ತುತ ಕ್ಯಾಂಪಸ್‌ನ ಶೈಕ್ಷಣಿಕ ತೊಂದರೆಗಳ ಹಾಗೂ ತರಗತಿಗಳನ್ನು ನಿರ್ವಹಿಸಲು ಆಗುತ್ತಿರುವ ತೊಂದರೆಗಳನ್ನು ಕುರಿತು ಸದಸ್ಯರುಗಳಿಗೆ ಮಾನ್ಯ ಅಧ್ಯಕ್ಷರು ವಿವರಿಸಿದರು ಹಾಗೂ ವಿಶ್ವವಿದ್ಯಾನಿಲಯದ ಸರ್ವತೋಮುಖ ಅಭಿವೃದ್ಧಿಗೆ ಹೊಸ ಕ್ಯಾಂಪಸ್ ನಿರ್ಮಾಣ ಅತ್ಯಾವಶ್ಯಕ ಎಂಬುದರ ಬಗ್ಗೆ ಮಾನ್ಯ ಅಧ್ಯಕ್ಷರು ವಿವರಿಸಿದರು. ಹೊಸ ಕ್ಯಾಂಪಸ್ ಅಭಿವೃದ್ಧಿಯನ್ನು ಪ್ರಸ್ತುತ ಹಣಕಾಸಿನ ಸಾಲಿನಲ್ಲಿ ಕೊವಿಡ್–19 ಹಿನ್ನೆಲೆಯಲ್ಲಿ ಸ್ಥಗಿತಗೊಳಿಸುವಂತೆ ಶ್ರೀ ಶ್ರೀನಿವಾಸ್ ಆರ್.ಕೆ., ಅವರು ತಿಳಿಸಿದರು. ಸರ್ಕಾರದ ವತಿಯಿಂದ ಪ್ರಾರಂಭಿಸಿರುವ ಹೆಚ್‌ಆರ್‌ಎಂಎಸ್ ಸಿಸ್ಟಂ ಮೂಲಕ ವೇತನವನ್ನು ಪಾವತಿಸಲಾಗುವುದರಿಂದ, ವಿಶ್ವವಿದ್ಯಾನಿಲಯದಲ್ಲಿ ಸದರಿ ವ್ಯವಸ್ಥೆ ಅಳವಡಿಸುವುದರಿಂದ ಆಂತರಿಕ ಸಂಪನ್ಮೂಲವನ್ನು ವೇತನಕ್ಕೆ ಉಪಯೋಗಿಸಲು ಅವಕಾಶವಿರುವುದಿಲ್ಲ–ವೆಂದು ಹಣಕಾಸು ಅಧಿಕಾರಿಗಳು ವಿವರಿಸಿದರು. ಮಾನ್ಯ ಸದಸ್ಯರಾದ ಶ್ರೀ ಸುನಿಲ್ ಪ್ರಸಾದ್ ಟಿ.ಎಸ್., ಅವರು ಕೋವಿಡ್–19 ಪರಿಸ್ಥಿತಿಯಲ್ಲಿ ಸರ್ಕಾರದಿಂದ ಮುಂದಿನ ದಿನಗಳಲ್ಲಿ ಆಂತರಿಕ ಸಂಪನ್ಮೂಲದಿಂದಲೇ ವೇತನ ಪಾವತಿಸುವಂತೆ ನಿರ್ದೇಶನ ಬಂದಲ್ಲಿ ಆಂತರಿಕ ಸಂಪನ್ಮೂಲವನ್ನು ಉಪಯೋಗಿಸಿಕೊಳ್ಳ–ಬಹುದಾಗಿರುವುದರಿಂದ ಆಂತರಿಕ ಸಂಪನ್ಮೂಲವನ್ನು ಹೊಸ ಕ್ಯಾಂಪಸ್ ಅಭಿವೃದ್ಧಿಗೆ ಈ ವರ್ಷದಲ್ಲಿ (2020–21)

| | | | |
|---|---|---|---|
| | | | ಉಪಯೋಗಿಸದಂತೆ ನಿರ್ಣಯಿಸಲಾಯಿತು. ಸದಸ್ಯರಾದ ಪ್ರೊ. ಪಿ. ಪರಮಶಿವಯ್ಯ ಮತ್ತು ಪ್ರೊ. ಬಿ.ಟಿ. ಸಂಪತ್ ಕುಮಾರ್ ಅವರು ಹೊಸ ಕ್ಯಾಂಪಸ್ ಅಭಿವೃದ್ಧಿಗೆ ಆಂತರಿಕ ಸಂಪನ್ಮೂಲದ ಬಳಕೆ ಸದ್ಯಕ್ಕೆ ಅಗತ್ಯವಿಲ್ಲವೆಂದು ತಿಳಿಸಿದರು. ಕೆಲವು ಸಿಂಡಿಕೇಟ್ ಸದಸ್ಯರುಗಳಿಗೆ ಪ್ರಸ್ತುತ ನೂತನ ಕ್ಯಾಂಪಸ್ ಅಭಿವೃದ್ಧಿಗೆ ಆಂತರಿಕ ಸಂಪನ್ಮೂಲವನ್ನು ಉಪಯೋಗಿಸುವುದನ್ನು ಸ್ಥಗಿತಗೊಳಿಸುವಂತೆ ಹಲವಾರು ಪ್ರಾಧ್ಯಾಪಕರು ಮನವಿ ಮಾಡಿಕೊಂಡಿರುವುದನ್ನು ಸದಸ್ಯರುಗಳು ಸಭೆಯ ಗಮನಕ್ಕೆ ತಂದರು. ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ಹೊಸ ಕ್ಯಾಂಪಸ್ ಅಭಿವೃದ್ಧಿಗೆ ಸರ್ಕಾರದ ಹಣ ಬರುವ ತನಕ ಇನ್ನು ಮುಂದೆ ವಿ.ವಿ. ಹಣವನ್ನು ಉಪಯೋಗಿಸದಂತೆ ತೀರ್ಮಾನಿಸಲಾಯಿತು. |
| ವಿಶ್ವವಿದ್ಯಾನಿಲಯದ ವಿವಿಧ ಉಪ ಸಮಿತಿಗಳನ್ನು ರಚಿಸುವ ಕುರಿತು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಸವಿಸ್ತಾರವಾಗಿ ಚರ್ಚಿಸುವ ಬಗ್ಗೆ ತೀರ್ಮಾನಿಸಲಾಯಿತು. | | | |
| ದಿನಾಂಕ 25.02.2020 ರಂದು ನಡೆದ ವಿಶ್ವವಿದ್ಯಾನಿಲಯದ 13ನೇ ಘಟಿಕೋತ್ಸವವು ಯಶಸ್ವಿಯಾಗಿ ಮುಕ್ತಾಯಗೊಂಡಿದ್ದು, ಈ ಸಂಬಂಧ ಘನತೆವೆತ್ತ ಕುಲಾಧಿಪತಿಗಳು, ಆಹ್ವಾನಿತರು ಹಾಗೂ ಸಾರ್ವಜನಿಕರಿಂದ ಶ್ಲಾಘನೆ / ಪ್ರಶಂಸೆ ವ್ಯಕ್ತವಾಗಿರುವುದನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಈ ಹಿನ್ನೆಲೆಯಲ್ಲಿ ಕಾರ್ಯಕ್ರಮವು ಯಶಸ್ವಿಗೊಳ್ಳಲು ಶ್ರಮಿಸಿದ ಎಲ್ಲಾ ಉಸ್ತುವಾರಿ ಸಮಿತಿಗಳ ಅಧ್ಯಕ್ಷರು/ಸಂಚಾಲಕರು/ಸದಸ್ಯರು, ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ ಮತ್ತು ಸಿಂಡಿಕೇಟ್ ಸದಸ್ಯರುಗಳು, ವಿದ್ಯಾರ್ಥಿ ಸ್ವಯಂ ಸೇವಕರು ಹಾಗೂ ಮಾಧ್ಯಮ ಮತ್ತು ಮುದ್ರಣ ಮಿತ್ರರಿಗೆಲ್ಲರಿಗೂ ಸಿಂಡಿಕೇಟ್ ಸಭೆಯು ಧನ್ಯವಾದಗಳನ್ನು ಅರ್ಪಿಸಿತು. | | | |
| **ಹೆಚ್ಚುವರಿ ಕಾರ್ಯಸೂಚಿಗಳು** | | | |
| **ಶೈಕ್ಷಣಿಕ ವಿಭಾಗ** | | | |
| 31 | 2019-20.ಸಾ.ಸಿಂ-06<br>ಶೈ.ವಿಭಾಗ-13 | ಪದವಿ ಶೈಕ್ಷಣಿಕ ಹಂತದಲ್ಲಿ ಜಾನಪದ ವಿಷಯವನ್ನು ಐಚ್ಛಿಕವಾಗಿ ಅಳವಡಿಸುವ ಬಗ್ಗೆ. | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ಈಗಾಗಲೇ ಇರುವ ಪಠ್ಯಕ್ರಮಗಳಲ್ಲಿ ಜಾನಪದ ವಿಷಯವು ಇರುವುದರಿಂದ ಹಾಗೂ ಜಾನಪದ ವಿಷಯಕ್ಕೆ ಪ್ರತ್ಯೇಕವಾದ ವಿಶ್ವವಿದ್ಯಾನಿಲಯವೂ ಇರುವುದರಿಂದ ಜಾನಪದ ವಿಷಯದ ಐಚ್ಛಿಕ ಪತ್ರಿಕೆಯನ್ನು ಅಳವಡಿಸುವ ಅಗತ್ಯವಿರುವುದಿಲ್ಲ ಎಂಬ ವಿದ್ಯಾ ವಿಷಯಕ ಪರಿಷತ್ತಿನ ಶಿಫಾರಸ್ಸನ್ನು ಸಭೆಯು ಅನುಮೋದಿಸಿತು. |
| 32 | 2019-20.ಸಾ.ಸಿಂ-06<br>ಶೈ.ವಿಭಾಗ-14 | ನಾಲ್ಕು ವರ್ಷದ ಇಂಟಿಗ್ರೇಟೆಡ್ ಬಿ.ಇಡಿ. ಕೋರ್ಸ್‌ನ ವಿನಿಯಮದ ಕುರಿತು. | ನಾಲ್ಕು ವರ್ಷದ ಇಂಟಿಗ್ರೇಟೆಡ್ ಬಿ.ಇಡಿ. ಕೋರ್ಸ್‌ನ್ನು ಪ್ರಾರಂಭಿಸಲು ಸರ್ಕಾರವು ರಾಜ್ಯದಲ್ಲಿ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯಲ್ಲಿ ಬರುವ ಕೆಲವು ಕಾಲೇಜುಗಳನ್ನು ಗುರುತಿಸಿರುವುದನ್ನು ಹಾಗೂ ಈ ಸಂಬಂಧ ವಿನಿಯಮವನ್ನು ಸಿದ್ದಪಡಿಸಿ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿರುವುದನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಈ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ನಾಲ್ಕು ವರ್ಷದ ಇಂಟಿಗ್ರೇಟೆಡ್ ಬಿ.ಇಡಿ. ಕೋರ್ಸ್‌ನ್ನು ಪ್ರಾರಂಭಿಸಲು ಸರ್ಕಾರದಿಂದ ಬಂದಿರುವ ವಿನಿಯಮವನ್ನು ಅನುಮೋದಿಸಬಹುದೆಂದು ವಿದ್ಯಾ ವಿಷಯಕ ಪರಿಷತ್ತು ಮಾಡಿರುವ ಶಿಫಾರಸ್ಸನ್ನು ಸಭೆಯು ಅನುಮೋದಿಸಿತು. |

| | | | |
|---|---|---|---|
| ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ | | | |
| 33 | 2019-20.ಸಾ.ಸಿಂ-06 ಸಾ&ಅ ವಿಭಾಗ-09 | ತುಮಕೂರು ವಿಶ್ವವಿದ್ಯಾನಿಲಯ ಮತ್ತು Tumkur Area Council, Karnataka Central Diocese Church of South India, Tumakuru ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯ ಮತ್ತು Tumkur Area Council, Karnataka Central Diocese Church of South India, Tumakuru ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದನ್ನು ಸಭೆಯು ತಿರಸ್ಕರಿಸಿತು. |
| 34 | 2019-20.ಸಾ.ಸಿಂ-06 ಸಾ&ಅ ವಿಭಾಗ-10 | ಮೆ. ಗೀತಾ ಆಫ್ಸೆಟ್ ಪ್ರಿಂಟರ್ಸ್, ಬಳ್ಳಾರಿ ಇವರಿಗೆ ಹಣ ಪಾವತಿಸುವ ಕುರಿತು. | ಮೆ. ಗೀತಾ ಆಫ್ಸೆಟ್ ಪ್ರಿಂಟರ್ಸ್, ಬಳ್ಳಾರಿ ಇವರಿಗೆ ರೂ. 96400-00 ಗಳ ಪಾವತಿಸಿರುವ ಕ್ರಮವನ್ನು ಸಭೆಯು ಸ್ಥಿರೀಕರಿಸಿತು. |
| ಸಿಬ್ಬಂದಿ ವಿಭಾಗ | | | |
| 35 | 2019-20.ಸಾ.ಸಿಂ-06 ಸಿಬ್ಬಂದಿ ವಿಭಾಗ-06 | ಪ್ರೊ. ಬಿ. ಶೇಖರ್, ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಇವರ ವೈದ್ಯಕೀಯ ವೆಚ್ಚ ಮರು ಪಾವತಿ ಕುರಿತು. | ಪ್ರೊ. ಬಿ. ಶೇಖರ್, ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಇವರ ವೈದ್ಯಕೀಯ ವೆಚ್ಚವನ್ನು ಸರ್ಕಾರದ ಆದೇಶ ದಿನಾಂಕ 19.03.2020 ರಂತೆ ಸಿಜಿಎಚ್ಎಸ್ ದರಗಳನ್ವಯ ರೂ.1,57,320.00 ಗಳನ್ನು ಮರು-ಪಾವತಿಸಲು ಸಭೆಯು ಅನುಮೋದಿಸಿತು. ಮುಂದುವರೆದು, ಸಿ.ಜಿ.ಎಚ್.ಎಸ್. ದರಗಳನ್ವಯ ಡಾ. ಶ್ರೀಪಾದ್ ಕುಲಕರ್ಣಿ ಇವರಿಗೆ ರೂ.43,975.00 ಗಳನ್ನು ಮರುಪಾವತಿಸಬೇಕಾಗಿರುವುದನ್ನು ಮಾನ್ಯ ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಈ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಪ್ರೊ. ಬಿ.ಶೇಖರ್ ಹಾಗೂ ಡಾ.ಶ್ರೀಪಾದ್ ಕುಲಕರ್ಣಿ ಇವರ ವೈದ್ಯಕೀಯ ವೆಚ್ಚ ಮರು ಪಾವತಿಯ ಕುರಿತಂತೆ ಸರ್ಕಾರಕ್ಕೆ ಮತ್ತೊಮ್ಮೆ ಪರಿಶೀಲನೆಗಾಗಿ ಸಲ್ಲಿಸುವಂತೆ ಶ್ರೀ ಶ್ರೀನಿವಾಸ್ ಆರ್.ಕೆ. ರವರು ತಿಳಿಸಿದರು. ತುಮಕೂರು ವಿಶ್ವವಿದ್ಯಾನಿಲಯದ ಎಲ್ಲಾ ಸಿಬ್ಬಂದಿಗಳಿಗೆ ಗ್ರೂಪ್ ಇನ್ಸುರೆನ್ಸ್ ಪ್ರಕ್ರಿಯೆಯನ್ನು ಪ್ರಾರಂಭಿಸಲು ಎಲ್ಲಾ ಸದಸ್ಯರುಗಳು ಸರ್ವಾನುಮತ-ದಿಂದ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಗ್ರೂಪ್ ಇನ್ಸುರೆನ್ಸ್ ಏಜೆನ್ಸಿ ಅವರನ್ನು ವಿಶ್ವವಿದ್ಯಾನಿಲಯಕ್ಕೆ ಪರಿಚಯಿಸಿ ಯೋಜನೆಗಳ ಬಗ್ಗೆ ವಿವರಿಸಲು ಕ್ರಮವಹಿಸಲಾಗುವುದೆಂದು ಡಾ.ಭಾಗ್ಯಲಕ್ಷ್ಮೀ ಹಿರೇಂದ್ರ ಶಾ ಮತ್ತು ಶ್ರೀ ಟಿ.ಡಿ. ವಿನಯ್ ಅವರು ತಿಳಿಸಿದರು. |
| ಪರೀಕ್ಷಾ ವಿಭಾಗ | | | |
| 36 | 2019-20.ಸಾ.ಸಿಂ-06 ಪ.ವಿಭಾಗ-03 | ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣದ ವೆಚ್ಚವನ್ನು ಪಾವತಿಸುವ ಕುರಿತು. | ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣದ ವೆಚ್ಚದ ಮೊತ್ತ ರೂ. 146853-00 ಗಳನ್ನು ಪಾವತಿಸಲು ಸಭೆಯು ಅನುಮೋದಿಸಿತು. |
| 37 | 2019-20.ಸಾ.ಸಿಂ-06 ಪ.ವಿಭಾಗ-04 | 2020ರ ಫೆಬ್ರವರಿ ಮಾಹೆಯಲ್ಲಿ ನಡೆದ ಸ್ನಾತಕ ಶಿಕ್ಷಣ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಬಾಡಿಗೆಗೆ ಪಡೆಯಲಾಗಿರುವ ವಾಹನಗಳ ಬಾಡಿಗೆಯ ಮೊತ್ತ ಪಾವತಿಸುವ ಕುರಿತು. | 2020ರ ಫೆಬ್ರವರಿ ಮಾಹೆಯಲ್ಲಿ ನಡೆದ ಸ್ನಾತಕ ಶಿಕ್ಷಣ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಬಾಡಿಗೆಗೆ ಪಡೆಯಲಾಗಿರುವ ವಾಹನಗಳ ಬಾಡಿಗೆಯ ಮೊತ್ತ ರೂ. 94800-00 ಗಳನ್ನು ಪಾವತಿಸಲು ಸಭೆಯು ಅನುಮೋದಿಸಿತು. |
| ಸಂಶೋಧನಾ ವಿಭಾಗ | | | |
| 38 | 2019-20.ಸಾ.ಸಿಂ-06 ಪಿಹೆಚ್.ಡಿ. ವಿಭಾಗ-01 | 2012-13ನೇ ಸಾಲಿನ ಸಂಶೋಧನಾರ್ಥಿಗಳು ಏಳು ವರ್ಷ ಹಾಗೂ ದಂಡಶುಲ್ಕದೊಂದಿಗೆ ಅನಿವಾರ್ಯ ಪರಿಸ್ಥಿತಿಯೆಂದು ಆರು ತಿಂಗಳ ಹೆಚ್ಚುವರಿ ಅವಕಾಶ ನೀಡಿದ್ದರೂ, ಮಹಾಪ್ರಬಂಧ ಸಲ್ಲಿಸದಿರುವ ಕುರಿತು. | 2012-13ನೇ ಸಾಲಿನ ಸಂಶೋಧನಾರ್ಥಿಗಳು ಏಳು ವರ್ಷ ಹಾಗೂ ದಂಡಶುಲ್ಕದೊಂದಿಗೆ ಅನಿವಾರ್ಯ ಪರಿಸ್ಥಿತಿಯೆಂದು ಆರು ತಿಂಗಳ ಹೆಚ್ಚುವರಿ ಅವಕಾಶ ನೀಡಿದ್ದರೂ, ಮಹಾಪ್ರಬಂಧ ಸಲ್ಲಿಸದಿರುವ ಕುರಿತು ಮಾನ್ಯ ಅಧ್ಯಕ್ಷರು ಸಭೆಗೆ ವಿವರಿಸಿದರು ಹಾಗೂ ಈಗಾಗಲೇ ದಿನಾಂಕ 19.05.2020 ರಂದು ನಡೆದ |

| | | | |
|---|---|---|---|
| | | | ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯವನ್ನು ಸಭೆಯ ಗಮನಕ್ಕೆ ತಂದರು. ಸದರಿ ವಿಷಯದ ಬಗ್ಗೆ ಹಲವಾರು ಸದಸ್ಯರುಗಳು ಸಂಶೋಧನಾರ್ಥಿಗಳಿಗೆ ಲಾಕ್‌ಡೌನ್ ಅವಧಿಯವನ್ನು ಅವರು ಸಂಶೋಧನಾ ಹಿತದೃಷ್ಟಿಯಿಂದ ವಿಸ್ತರಿಸಿ, ಅಂತಿಮ ಪ್ರಬಂಧವನ್ನು ಸಲ್ಲಿಸಲು ಅವಕಾಶ ಕಲ್ಪಿಸುವಂತೆ ಕೋರಿದರು. ಮುಂದುವರೆದು ಸದಸ್ಯರಾದ ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ, ಶ್ರೀ ಪ್ರಸನ್ನ ಕುಮಾರ್ ಹಾಗೂ ಶ್ರೀ ಸುನಿಲ್ ಪ್ರಸಾದ್ ಟಿ.ಎಸ್., ಪ್ರಸ್ತುತ ಸಂಶೋಧನಾರ್ಥಿಗಳ ಆರ್ಥಿಕ ಪರಿಸ್ಥಿತಿ ಮತ್ತು ಕೋವಿಡ್-19 ಹಿನ್ನೆಲೆಯನ್ನು ಗಮನದಲ್ಲಿಟ್ಟು-ಕೊಂಡು ಅವರಿಗೆ ಅವಧಿಯನ್ನು ದಂಡಶುಲ್ಕ ರಹಿತವಾಗಿ ವಿಸ್ತರಿಸುವಂತೆ ತಿಳಿಸಿದರು. ಹಲವಾರು ಸಂಶೋಧನಾರ್ಥಿಗಳು ಸಂಶೋಧನಾ ಅವಧಿ ಪೂರ್ಣಗೊಂಡರು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿರುವುದಿಲ್ಲ ಇದರಿಂದ ಸಂಶೋಧನಾ ಗುಣಮಟ್ಟ ಮತ್ತು ವಿಶ್ವವಿದ್ಯಾನಿಲಯದ ಘನತೆಗೆ ಧಕ್ಕೆ ಉಂಟಾಗುವುದರ ಬಗ್ಗೆ ಮಾನ್ಯ ಅಧ್ಯಕ್ಷರು ವಿವರಿಸಿದರು.<br>ಸುದೀರ್ಘವಾಗಿ ಚರ್ಚಿಸಿದ ಸಿಂಡಿಕೇಟ್ ಸಭೆಯು ಕೋವಿಡ್-2019ರ ಕಾರಣ ಹಾಗೂ ಯು.ಜಿ.ಸಿ. ಮಾರ್ಗಸೂಚಿಯನ್ವಯ 2012-13ನೇ ಸಾಲಿನ ಸಂಶೋಧನಾರ್ಥಿಗಳಿಗೆ ದಿನಾಂಕ 23.03.2020 (ಲಾಕ್‌ಡೌನ್ ಪ್ರಾರಂಭದ ದಿನಾಂಕ) ರಿಂದ ದಿನಾಂಕ 02.05.2020 (ಸದರಿಯವರ ಸಂಶೋಧನಾ ಅವಧಿ ಮುಗಿಯುವ ದಿನಾಂಕ) ಅವಧಿಯ ಒಟ್ಟು 41 ದಿನಗಳನ್ನು ದಂಡಶುಲ್ಕವಿಲ್ಲದೇ ದಿನಾಂಕ 03.05.2020 ರಿಂದ ದಿನಾಂಕ 12.06.2020ರವರೆಗೆ ವಿಸ್ತರಿಸಿ ಅಂತಿಮ ಪ್ರಬಂಧವನ್ನು ಸಲ್ಲಿಸಲು ಸಂಶೋಧನಾರ್ಥಿಗಳಿಗೆ ಸೂಚಿಸುವಂತೆ ನಿರ್ಣಯಿಸಿತು. ಸದರಿ ಕಾಲಾವಕಾಶ ಪೂರ್ಣಗೊಂಡ ನಂತರ ಪ್ರತಿ ಮಾಹೆಯಾನ ರೂ.10,000-00 ದಂಡಶುಲ್ಕವನ್ನು (ಗರಿಷ್ಟ 06 ತಿಂಗಳು) ವಿಧಿಸಲು ನಿರ್ಣಯಿಸಲಾಯಿತು. |
| 39 | 2019-20.ಸಾ.ಸಿಂ-06<br>ಪಿಹೆಚ್.ಡಿ. ವಿಭಾಗ-02 | 2013-14ನೇ ಸಾಲಿನ ಸಂಶೋಧನಾರ್ಥಿಗಳ ಪಿಹೆಚ್.ಡಿ. ಸಂಶೋಧನೆಯ ಅವಧಿಯು ಗರಿಷ್ಠ ಏಳು ವರ್ಷಗಳು (6+1) ಮುಗಿಯುವ ಹಂತದಲ್ಲಿದ್ದು, ಕೆಲವು ಸಂಶೋಧನಾರ್ಥಿಗಳು ಮಹಾಪ್ರಬಂಧ (Soft Copy) ಸಲ್ಲಿಸುವ ಪ್ರಕ್ರಿಯೆ ಅಪರಿಪೂರ್ಣವಾಗಿರುವ ಕುರಿತು. | 2013-14ನೇ ಸಾಲಿನ ಸಂಶೋಧನಾರ್ಥಿಗಳು ಏಳು ವರ್ಷ ಅವಧಿ ಮುಗಿದಿದ್ದರೂ ಮಹಾಪ್ರಬಂಧ ಸಲ್ಲಿಸದಿರುವ ಕುರಿತು ಮಾನ್ಯ ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಮುಂದುವರೆದು, ಹೆಚ್ಚಿನ ಸಂಶೋಧನಾರ್ಥಿಗಳ ಮಾರ್ಗದರ್ಶಕರು ವಿಶ್ವವಿದ್ಯಾನಿಲಯದೇ ಪ್ರಾಧ್ಯಾಪಕರು/ ಅಧ್ಯಾಪಕರಾಗಿರುವುದರಿಂದ ಹಾಗೂ ಎರಡು ಸಂಶೋಧನಾ ಪತ್ರಿಕೆ ಪ್ರಕಟಿಸದಿರುವುದರಿಂದ 2012-13 ಸಂಶೋಧನಾರ್ಥಿಗಳಿಗೆ ನೀಡಿರುವ ಕಾಲಾವಕಾಶದ ಅವಶ್ಯಕತೆ ಇಲ್ಲದಿದ್ದರೂ ಈಗಾಗಲೇ ದಿನಾಂಕ 19.05.2020 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಾಹೆಯಾನ ರೂ. 10,000-00 (ಗರಿಷ್ಠ 6 ತಿಂಗಳು) ದಂಡಶುಲ್ಕದೊಂದಿಗೆ ಅವಧಿಯನ್ನು ವಿಸ್ತರಿಸಲು ಅವಕಾಶ ನೀಡಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು. ಸದರಿ ವಿಷಯದ ಬಗ್ಗೆ ಹಲವಾರು |

| | | | | |
|---|---|---|---|---|
| | | | | ಸದಸ್ಯರುಗಳು ಸಂಶೋಧನಾರ್ಥಿಗಳಿಗೆ ಲಾಕ್‌ಡೌನ್ ಅವಧಿಯವನ್ನು ಅವರು ಸಂಶೋಧನಾ ಹಿತದೃಷ್ಟಿಯಿಂದ ವಿಸ್ತರಿಸಿ, ಅಂತಿಮ ಪ್ರಬಂಧವನ್ನು ಸಲ್ಲಿಸಲು ಅವಕಾಶ ಕಲ್ಪಿಸುವಂತೆ ಕೋರಿದರು. ಮುಂದುವರೆದು ಸದಸ್ಯರಾದ ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ ಶ್ರೀ ಪ್ರಸನ್ನ ಕುಮಾರ್ ಹಾಗೂ ಶ್ರೀ ಸುನಿಲ್ ಪ್ರಸಾದ್ ಟಿ.ಎಸ್., ಪ್ರಸ್ತುತ ಸಂಶೋಧನಾರ್ಥಿಗಳ ಆರ್ಥಿಕ ಪರಿಸ್ಥಿತಿ ಮತ್ತು ಕೋವಿಡ್-19 ಹಿನ್ನೆಲೆಯನ್ನು ಗಮನದಲ್ಲಿಟ್ಟು-ಕೊಂಡು ಅವರಿಗೆ ಅವಧಿಯನ್ನು ದಂಡಶುಲ್ಕ ರಹಿತವಾಗಿ ವಿಸ್ತರಿಸುವಂತೆ ತಿಳಿಸಿದರು. ಹಲವಾರು ಸಂಶೋಧನಾರ್ಥಿಗಳು ಸಂಶೋಧನಾ ಅವಧಿ ಪೂರ್ಣಗೊಂಡರು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿರುವುದಿಲ್ಲ ಇದರಿಂದ ಸಂಶೋಧನಾ ಗುಣಮಟ್ಟ ಮತ್ತು ವಿಶ್ವವಿದ್ಯಾನಿಲಯದ ಘನತೆಗೆ ಧಕ್ಕೆ ಉಂಟಾಗುವುದರ ಬಗ್ಗೆ ಮಾನ್ಯ ಅಧ್ಯಕ್ಷರು ವಿವರಿಸಿದರು.<br>ಸುದೀರ್ಘವಾಗಿ ಚರ್ಚಿಸಿದ ಸಿಂಡಿಕೇಟ್ ಸಭೆಯು ಕೋವಿಡ್-2019ರ ಕಾರಣ ಹಾಗೂ ಯು.ಜಿ.ಸಿ. ಮಾರ್ಗಸೂಚಿಯನ್ವಯ 2013-14ನೇ ಸಾಲಿನ ಸಂಶೋಧನಾರ್ಥಿಗಳಿಗೆ ದಿನಾಂಕ 23.03.2020 (ಲಾಕ್‌ಡೌನ್ ಪ್ರಾರಂಭದ ದಿನಾಂಕ) ರಿಂದ ದಿನಾಂಕ 17.05.2020 (ಸದರಿಯವರ ಸಂಶೋಧನಾ ಅವಧಿ ಮುಗಿಯುವ ದಿನಾಂಕ) ಅವಧಿಯ ಒಟ್ಟು 56 ದಿನಗಳನ್ನು ದಂಡಶುಲ್ಕವಿಲ್ಲದೇ ದಿನಾಂಕ 18.05.2020 ರಿಂದ ದಿನಾಂಕ 12.07.2020ರವರೆಗೆ ವಿಸ್ತರಿಸಿ ಅಂತಿಮ ಪ್ರಬಂಧವನ್ನು ಸಲ್ಲಿಸಲು ಸಂಶೋಧನಾರ್ಥಿಗಳಿಗೆ ಸೂಚಿಸುವಂತೆ ನಿರ್ಣಯಿಸಿತು. ಸದರಿ ಕಾಲಾವಕಾಶ ಪೂರ್ಣಗೊಂಡ ನಂತರ ಪ್ರತಿ ಮಾಹೆಯಾನ ರೂ.10,000-00 ದಂಡಶುಲ್ಕವನ್ನು (ಗರಿಷ್ಠ 06 ತಿಂಗಳು) ವಿಧಿಸಲು ನಿರ್ಣಯಿಸಲಾಯಿತು. |

ಹೆಚ್ಚುವರಿ ವಿಷಯ: ಶ್ರೀ ರಾಜಣ್ಣ ಕೆ.ಎಂ., ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು ಇವರ ಮೇಲೆ ಪರೀಕ್ಷೆಯ ಅಕ್ರಮ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದರೂ ಸಹಾ ಸದರಿಯವರನ್ನು ಸಿಂಡಿಕೇಟ್ ಸದಸ್ಯರನ್ನಾಗಿ ನೇಮಕ ಮಾಡಿರುವ ಕುರಿತು ಪ್ರಸ್ತಾಪಿಸಲಾಯಿತು. ಸದರಿ ವಿಷಯದ ಬಗ್ಗೆ ಮಾಹಿತಿ ನೀಡಿದ ಮಾನ್ಯ ಕುಲಪತಿಗಳು ಈಗಾಗಲೇ ಸದರಿಯವರ ಮೇಲೆ ವಿಚಾರಣಾ ಸಮಿತಿಯ ಶಿಫಾರಸ್ಸಿನನ್ವಯ ಅಗತ್ಯ ಕ್ರಮವಹಿಸಲಾಗಿದ್ದು, ಸದರಿಯವರು ಎಲ್ಲಾ ದಂಡ ಶುಲ್ಕವನ್ನು ಪಾವತಿಸಿರುವುದನ್ನು ಗಮನಕ್ಕೆ ತರುತ್ತಾ, ಮೇಲಿನ ಅಂಶಗಳನ್ವಯ ಹಾಗೂ ಜ್ಯೇಷ್ಠತೆ ಮತ್ತು ಸರದಿಯ ಆಧಾರದ ಮೇಲೆ ಸದರಿಯವರನ್ನು ಸದಸ್ಯರನ್ನಾಗಿ ನೇಮಕ ಮಾಡಿರುವುದನ್ನು ಸಭೆಯ ಗಮನಕ್ಕೆ ತಂದರು.

22/05

ಕುಲಸಚಿವರು
ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಮಾನ್ಯ ಕುಲಪತಿಗಳು
ಕುಲಪತಿಗಳು
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು.